<u>2017 ಕ.ತೀ.ವ. 1823</u>

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್

## ಶ್ರೀಮತಿ ಆಯೇಷಾ ಬೇಗಮ್ ಮತ್ತು ಇನ್ನೊಬ್ಬರು –ವಿರುದ್ಧ– ಸರ್ದಾರುಲ್ಲಾ ಖಾನ್ ಮತ್ತು ಇತರರು*

**1988ರ ಮೋಟಾರು ವಾಹನ ಅಧಿನಿಯಮ ಕಲಂ 173(1)ರಡಿಯಲ್ಲಿ ಸಂಕೀರ್ಣ ಮೊದಲನೇ ಮೇಲ್ಮನವಿ.**

**ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯ ವಾರಸುದಾರರು ನ್ಯಾಯಾಧಿಕರಣದಲ್ಲಿ ಕ್ಲೇಮು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕ್ಲೇಮು ಅರ್ಜಿಯನ್ನು ಪುರಸ್ಕರಿಸಿದ ನ್ಯಾಯಾಧಿಕರಣವು 6,39,000/– ರೂ.ಗಳಷ್ಟು ಪರಿಹಾರವನ್ನು ವಾರ್ಷಿಕ ಶೇ.6ರಷ್ಟು ಬಡ್ಡಿಯೊಂದಿಗೆ ನೀಡುವಂತೆ ಎದುರುದಾರರಿಗೆ ಸೂಚಿಸಿ ಐತೀರ್ಪನ್ನು ನೀಡುತ್ತದೆ. ಪರಿಹಾರ ಮೊತ್ತವನ್ನು ಹೆಚ್ಚಿಸುವಂತೆ ಕೋರಿ ಸದರಿ ಮೇಲ್ಮನವಿ.**

**ಮೃತ ವ್ಯಕ್ತಿಯ ಸ್ಥಿರ ಆದಾಯಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ. ಈ ಕಾರಣದಿಂದ ಸದರಿ ಮೇಲ್ಮನವಿಯನ್ನು ಉಚ್ಚ ನ್ಯಾಯಾಲಯವು ವಜಾಗೊಳಿಸಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆಗಳು:*** | ***ಪ್ಯಾರಾಗಳಲ್ಲಿ*** |
|---|---|
| *1. 2013 ಎಸಿಜೆ 1403*<br>*ರಾಜೇಶ್ ಮತ್ತು ಇತರರು –ವಿರುದ್ಧ–*<br>*ರಾಜ್‌ಬೀರ್ ಸಿಂಗ್ ಮತ್ತು ಇತರರು* | *(ಉಲ್ಲೇ) 5* |
| *2. 2013 ಏಐಆರ್ ಎಸ್‌ಸಿಡಬ್ಲ್ಯೂ 3120*<br>*ರೇಷ್ಮಾ ಕುಮಾರಿ ಮತ್ತು ಇತರರು –ವಿರುದ್ಧ–*<br>*ಮದನ್ ಮೋಹನ್ ಮತ್ತು ಮತ್ತೊಬ್ಬರು* | *(ಉಲ್ಲೇ) 9* |

*ಎಂ.ಎಫ್.ಎ. ಸಂಖ್ಯೆ: 9119/2008, ದಿನಾಂಕ: 28ನೇ ಜುಲೈ, 2016.

| | | |
|---|---|---|
| *3.* | *ಐಎಲ್ಆರ್ 1979 ಕೆಎಆರ್ 1401 (ಎಫ್‌ಬಿ)*<br>*ಗೋವಿಂದ್‌ನಾಯಕ್ ಜಿ. ಕಲಘಟಗಿ –ವಿರುದ್ಧ–*<br>*ವೆಸ್ಟ್ ಪೇಟೆಂಟ್ ಪ್ರೆಸ್ ಕೋ ಲಿಮಿಟೆಡ್*<br>*ಮತ್ತು ಮತ್ತೊಬ್ಬರು* | *(ಉಲ್ಲೇ) 9* |
| *4.* | *ಐಎಲ್ಆರ್ 1987 ಕೆಎಆರ್ 1286 (ಎಫ್‌ಬಿ)*<br>*ಎಂ.ಎಂ. ಯರಗಟ್ಟಿ –ವಿರುದ್ಧ– ವಸಂತ್* | *(ಉಲ್ಲೇ) 9* |
| *5.* | *ಎಐಆರ್ 2013 ಎಸ್‌ಸಿ 1064*<br>*ಮ್ಯಾನೇಜರ್, ನ್ಯಾಷನಲ್ ಇನ್‌ಷೂರೆನ್ಸ್ ಕಂ.*<br>*ಲಿಮಿಟೆಡ್ –ವಿರುದ್ಧ– ಸಜು ಪಿ. ಪೌಲ್*<br>*ಮತ್ತು ಮತ್ತೊಬ್ಬರು* | *(ಉಲ್ಲೇ) 11* |
| *6.* | *(2013) 16 ಎಸ್‌ಸಿಸಿ 16ರ*<br>*ಮಹಾರಾಷ್ಟ್ರ ಸರ್ಕಾರ ಮತ್ತು ಮತ್ತೊಬ್ಬರು*<br>*–ವಿರುದ್ಧ– ಸರವ ಶ್ರಮಿಕ್ ಸಂಘ, ಸಾಂಗಲಿ*<br>*ಮತ್ತು ಇತರರು* | *(ಉಲ್ಲೇ) 11* |
| *7.* | *(1978)2 ಎಸ್‌ಸಿಸಿ 213*<br>*ಬೆಂಗಳೂರು ನೀರು ಸರಬರಾಜು ಮತ್ತು*<br>*ಒಳಚರಂಡಿ ಮಂಡಲಿ –ವಿರುದ್ಧ– ಎ. ರಾಜಪ್ಪ* | *(ಉಲ್ಲೇ) 11* |
| *8.* | *(1988) 4 ಎಸ್‌ಸಿಸಿ 12*<br>*ಒರಿಸ್ಸಾ ಸರ್ಕಾರ –ವಿರುದ್ಧ– ದಂಡಸಿ, ಸಾಹು* | *(ಉಲ್ಲೇ) 11* |
| *9.* | *(2014) 3 ಎಸ್‌ಸಿಸಿ 210*<br>*ಸಂಜಯ್ ವರ್ಮ –ವಿರುದ್ಧ–*<br>*ಹರಿಯಾಣ ರೋಡ್‌ವೇಸ್* | *(ಉಲ್ಲೇ) 13* |
| *10.* | *(2015) 6 ಎಸ್‌ಸಿಸಿ 347*<br>*ಮುನ್ನಾ ಲಾಲ್ ಜೈನ್ ಮತ್ತು ಇನ್ನೊಬ್ಬರು*<br>*–ವಿರುದ್ಧ– ವಿಪಿನ್ ಕುಮಾರ್ ಶರ್ಮ*<br>*ಮತ್ತು ಇತರರು* | *(ಉಲ್ಲೇ) 14* |

*11. (2015) 9 ಎಸ್‌ಸಿಸಿ 166*
*ನ್ಯಾಷನಲ್ ಇನ್‌ಷೂರನ್ಸ್ ಕಂಪನಿ ಲಿಮಿಟೆಡ್*
*-ವಿರುದ್ಧ- ಪುಷ್ಪಾ ಮತ್ತು ಇತರರು (ಉಲ್ಲೇ) 15*
*12. (2015) 9 ಎಸ್‌ಸಿಸಿ 150*
*ಶಶಿಕಲಾ ಮತ್ತು ಇತರರು -ವಿರುದ್ಧ-*
*ಗಂಗಲಕ್ಷ್ಮಮ್ಮ ಮತ್ತು ಇನ್ನೊಬ್ಬರು (ಉಲ್ಲೇ) 15*
*13. (2011) 4 ಎಸ್‌ಸಿಸಿ 589-*
*ಭಾರತ ಒಕ್ಕೂಟ ಮತ್ತು ಇತರರು -ವಿರುದ್ಧ-*
*ಎಸ್.ಕೆ. ಕಪೂರ್ (ಉಲ್ಲೇ) 16*
*14. (2010) 14 ಎಸ್‌ಸಿಸಿ 575*
*ಶಕ್ತಿ ದೇವಿ -ವಿರುದ್ಧ- ನ್ಯೂ ಇಂಡಿಯಾ*
*ಇನ್‌ಷೂರೆನ್ಸ್ ಕಂ. ಲಿಮಿಟೆಡ್ (ಉಲ್ಲೇ) 20*

ಅಪೀಲುದಾರರ ಪರವಾಗಿ : ಶ್ರೀಮತಿ ಸುಗುಣ ಆರ್. ರೆಡ್ಡಿ – ವಕೀಲರು
2ನೇ ಪ್ರತ್ಯಪೀಲುದಾರರ ಪರವಾಗಿ: ಶ್ರೀ ಡಿ. ವಿಜಯ್ ಕುಮಾರ್ – ವಕೀಲರು
3, 4 & 5ನೇ ಪ್ರತ್ಯಪೀಲುದಾರರಿಗೆ ಜಾರಿ ಮಾಡಲಾಗಿದ್ದು, ಪ್ರತಿನಿಧಿಸಿರುವುದಿಲ್ಲ.
1ನೇ ಎದುರುದಾರರಿಗೆ ನೋಟೀಸ್ ನೀಡಿರುವುದು ಸೂಕ್ತವಾಗಿದೆ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್:**

1. ಅಪೀಲುದಾರರು, ದಿನಾಂಕ 13.10.2000 ರಂದು ಸಂಭವಿಸಿದ ಮೋಟಾರು ವಾಹನ ಅಪಘಾತದಲ್ಲಿ ಮೃತರಾದ ಲೇಟ್ ರಹಮತುಲ್ಲಾನ ಪತ್ನಿ ಮತ್ತು ಮಗಳಾಗಿದ್ದಾರೆ. ಆತನ ಮರಣದ ಸಮಯದಲ್ಲಿ ಆತನಿಗೆ ಸುಮಾರು 28 ವರ್ಷಗಳ ವಯಸ್ಸಾಗಿತ್ತು. ಅವನು, ಸಾಮಿಲ್‌ನಲ್ಲಿ ಕೂಲಿಯಾಗಿ ಕೆಲಸ ಮಾಡುತ್ತಿದ್ದನು, ಮತ್ತು ಹೇಳಲಾದಂತೆ ಮಾಸಿಕ 4,000/- ರೂಪಾಯಿಗಳನ್ನು

ಗಳಿಸುತ್ತಿದ್ದನು, ಅವನು, ತನ್ನ ಪೋಷಕರಾದ, 1ನೇ ಪತ್ನಿ ಮತ್ತು ಆಕೆಯ ಮಗು, 2ನೇ ಪತ್ನಿ ಮತ್ತು ಆಕೆಯ ಮಗುವನ್ನು ಬಿಟ್ಟು ಹೋಗಿದ್ದಾನೆ. ಕ್ಲೇಮುದಾರರ ಪೈಕಿ ಒಬ್ಬರಾದ ಮೃತನ ತಂದೆಯು, ನ್ಯಾಯಾಧಿಕರಣದ ಮುಂದೆ ಕ್ಲೇಮು ಅರ್ಜಿಯು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಮೃತರಾಗಿದ್ದಾರೆ. ಎರಡು, ಪ್ರತ್ಯೇಕ ಕ್ಲೇಮು ಅರ್ಜಿಗಳನ್ನು, ದಾಖಲು ಮಾಡಲಾಗಿದೆ. ಎಂ.ವಿ.ಸಿ. ಸಂ.81/2005ರಲ್ಲಿ ಪ್ರಸ್ತುತ ಅಪೀಲುದಾರರಿಂದ ಒಂದನ್ನು ಮತ್ತು ಮೃತನ ತಾಯಿ, 2ನೇ ಪತ್ನಿ ಮತ್ತು ಆಕೆಯ ಮಗು ಮತ್ತೊಂದನ್ನು, ಎಂ.ವಿ.ಸಿ. ಸಂ.28/2001ರಲ್ಲಿ ಅಪೀಲುದಾರರಂತೆ ಸಹ ಪ್ರಸ್ತುತ ಅಪೀಲುದಾರರನ್ನು ಪಕ್ಷಕಾರರನ್ನಾಗಿ ಸೇರಿಸಲಾಗಿದೆ.

2. ಪ್ರಸ್ತುತ ಅಪೀಲುದಾರರಿಂದ ದಾಖಲು ಮಾಡಿದ ತಮ್ಮ ಹಕ್ಕುಗಳ ಬಗ್ಗೆ ಒತ್ತಾಯಿಸಲು ಅವರಿಗೆ ಸ್ವಾತಂತ್ರ್ಯವನ್ನು ಕಾಯ್ದಿರಿಸಿ ಸಂಬಂಧಿತ ಕ್ಲೇಮು ಅರ್ಜಿಯಲ್ಲಿ ಅವರನ್ನು ಪಕ್ಷಕಾರರಾಗಿಸಿ ಕ್ಲೇಮು ಅರ್ಜಿಯನ್ನು, ವಜಾಗೊಳಿಸಲಾಗಿದೆ. ಸಂಬಂಧಿತ ಇತರೇ ಕ್ಲೇಮು ಅರ್ಜಿಯುಷ್ಟರ ಮಟ್ಟಿಗೆ, ಇಲ್ಲಿನದರಲ್ಲಿ 1ನೇ ಅಪೀಲುದಾರರನ್ನು, ಪ್ರಾಸಾ.12ರಂತೆ ವಿಚಾರಣೆ ಮಾಡಲಾಗಿದೆ ಮತ್ತು ಅದರಲ್ಲಿರುವ 2ನೇ ಪತ್ನಿ 3ನೇ ಎದುರುದಾರರನ್ನು ಪ್ರಾಸಾ.6ರಂತೆ ವಿಚಾರಣೆ ಮಾಡಲಾಗಿದೆ.

3. ಕ್ಲೇಮುದಾರನು, ಸಾಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದನು ಮತ್ತು ಮಾಸಿಕ 4,000/– ರೂಪಾಯಿಗಳನ್ನು ಗಳಿಸುತ್ತಿದ್ದನೆಂಬುದನ್ನು ರುಜುವಾತು ಪಡಿಸುವ ದಾಖಲೆಯ ಸಾಕ್ಷ್ಯವಿರುವುದಿಲ್ಲವೆಂಬುದು ನ್ಯಾಯಾಧಿಕರಣಕ್ಕೆ ಕಂಡು ಬಂದಿದೆ, ಮೃತನ ಆದಾಯವನ್ನು, ಅಪಘಾತದ ವರ್ಷವನ್ನು ಮನಸ್ಸಿನಲ್ಲಿಟ್ಟುಕೊಂಡು, 3,000/– ರೂಪಾಯಿಗಳಂತೆ ತೆಗೆದುಕೊಳ್ಳಲಾಗಿದೆ. 16ರ ಗುಣಕ ಅನ್ವಯಿಸುತ್ತದೆ ಮತ್ತು ವೈಯಕ್ತಿಕ ವೆಚ್ಚಗಳ ಸಲುವಾಗಿ 1/3ರಷ್ಟನ್ನು ಕಳೆಯಲಾಗಿದೆ ಮತ್ತು ಭವಿಷ್ಯತ್ತಿನ ನಿರೀಕ್ಷೆಗಳು, ಅವಲಂಬನಾ ನಷ್ಟದ ಸಲುವಾಗಿ ಶೇಕಡಾ 50ರಷ್ಟನ್ನು ಸೇರಿಸುವ ಮೂಲಕ, 5,76,000/– ರೂಪಾಯಿಗಳೆಂದು ನಿರ್ದಿಷ್ಟಪಡಿಸಲಾಗಿರುತ್ತದೆ. (3,000/– x 12 x 16 ರೂಪಾಯಿಗಳು) ಕ್ಲೇಮುದಾರರು, ಶವ ಸಂಸ್ಕಾರದ

ವೆಚ್ಚಗಳ ಸಲುವಾಗಿ 3,000/– ರೂಪಾಯಿಗಳು, 1 ಮತ್ತು 3ನೇ ಕ್ಲೇಮುದಾರರಿಗೆ ದಾಂಪತ್ಯದ ನಷ್ಟದ ಸಲುವಾಗಿ 20,000/– ರೂಪಾಯಿಗಳು, ಪ್ರೀತಿ ಮತ್ತು ವಾತ್ಯಲ್ಯದ ನಷ್ಟದ ಸಲುವಾಗಿ 30,000/– ರೂಪಾಯಿಗಳು ಸಂಪದದ ನಷ್ಟದ ಸಲುವಾಗಿ ಇತರೇ ಮೊತ್ತ 10,000/– ರೂಪಾಯಿಗಳಿಗೆ ಹಕ್ಕುಳ್ಳವರಾಗಿರುತ್ತಾರೆಯೆಂದು ಅಭಿಪ್ರಾಯಪಟ್ಟಿದೆ. ಹೀಗಾಗಿ ಒಟ್ಟಾರೆಯಾಗಿ, 6,39,000/– ರೂಪಾಯಿಗಳ ಮೊತ್ತವನ್ನು ವಾರ್ಷಿಕ ಶೇಕಡಾ 6ರಂತೆ ಬಡ್ಡಿಯೊಂದಿಗೆ ಐತೀರ್ಪು ನೀಡಲಾಗಿದೆ.

4. ವೈಯಕ್ತಿಕ ವೆಚ್ಚಗಳ ಸಲುವಾಗಿ 1/3 ರಂತೆ ಇಳಿಕೆ ಮಾಡಲಾಗಿದ್ದು, ಮೃತನಷ್ಟರ ಮಟ್ಟಿಗೆ ಕಾನೂನು ಬಾಹಿರವಾಗಿದ್ದು, ಸದರಿ ವಿವಾಹಿತನಿಂದ ಜನಿಸಿದ, ತನ್ನ 2ನೇ ಪತ್ನಿ ಮತ್ತು ಅಪ್ರಾಪ್ತ ಮಗುವಲ್ಲದೇ ತನ್ನ ತಾಯಿ, 1 ಮತ್ತು 2ನೇ ಅಪೀಲುದಾರರನ್ನು ಬಿಟ್ಟು ಹೋಗಿದ್ದಾರೆಯೆಂದು ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ವಾದವನ್ನು ಮಂಡಿಸಿದ್ದಾರೆ. ಕಳೆತವು, 1/5 ಕ್ಕಿಂತ ಹೆಚ್ಚಾಗಿರಬಾರದೆಂದು ಒತ್ತಾಯಿಸಲಾಗಿದೆ. ಮೃತನ ವಯಸ್ಸು 28 ವರ್ಷಗಳಾಗಿರುವುದರಿಂದ ಕಂಡು ಬರುವ ಸಂಬಂಧಪಟ್ಟ 17ರ ಗುಣಕವನ್ನು 16ರ ಬದಲಿಗೆ ಅಳವಡಿಸಿಕೊಳ್ಳಬೇಕೆಂದು ಸಹ ಒತ್ತಾಯಿಸಲಾಗಿದೆ.

5. ಸಂಪ್ರದಾಯಿಕ ಶೀರ್ಷಿಕೆಗಳ ಸಲುವಾಗಿ ನೀಡಿದ ಮೊತ್ತವು, ***ರಾಜೇಶ್ ಮತ್ತು ಇತರರು -ವಿರುದ್ಧ- ರಾಜ್‌ಬೀರ್ ಸಿಂಗ್ ಮತ್ತು ಇತರರು*** [1] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿರುವಂತೆ ಅತಿ ಕಡಿಮೆಯದ್ದಾಗಿದೆಯೆಂದೂ ಸಹಾ ವಾದಿಸಿದ್ದಾರೆ.

6. ಮೃತನು, ಭದ್ರತೆಯ ಕೆಲಸದಲ್ಲಿರುವ ಉದ್ಯೋಗಿಯಾಗಿರುವುದಿಲ್ಲ ಮತ್ತು ಅವನು, ಸ್ಥಿರವಾದ ಆದಾಯವನ್ನು ಹೊಂದಿದ್ದಾನೆಂಬುದನ್ನು ತೋರಿಸುವ ಸಾಕ್ಷ್ಯವಿಲ್ಲದೇ ಇರುವುದರಿಂದ, ಭವಿಷ್ಯತ್ತಿನ ನಿರೀಕ್ಷೆಗಳ ಸಲುವಾಗಿ ಮೃತನ ಆದಾಯವನ್ನು ನ್ಯಾಯಾಧಿಕರಣ ಶೇಕಡಾ 50ರಷ್ಟನ್ನು ಸೇರಿಸಿರುವುದು ವಾಸ್ತವವಾಗಿ

1. 2013 ಎಸಿಜೆ 1403

ನ್ಯಾಯ ಸಮ್ಮತವಲ್ಲವೆಂದು ಎದುರುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ನಿವೇದಿಸಿದ್ದಾರೆ. ಅದನ್ನು ಅನುಮತಿಸದಿದ್ದಲ್ಲಿ, ನಷ್ಟ ಪರಿಹಾರದ ಮೊತ್ತವು ಸಾಕಷ್ಟು ಕಡಿಮೆಯಾಗುತ್ತಿತ್ತು. ಸಾಂಪ್ರದಾಯಿಕ ಶೀರ್ಷಿಕೆಗಳ ಅಡಿಯಲ್ಲಿ ನೀಡಲಾದ ಪರಿಹಾರವನ್ನು ಹೆಚ್ಚಿಸಬಹುದಿತ್ತೆಂದಿದ್ದಾರೆ. ಅವರನ್ನು 13ನೇ ಕಡಿತವು ಪೂರಕವಾಗಿದೆಯೆಂದಿರುವ ಅವರು, 2ನೇ ಪತ್ನಿ ಮತ್ತು ಆಕೆಯ ಮಗುವಿನ ಅವಲಂಬಿತರನ್ನು ಗಮನಕ್ಕೆ ತೆಗೆದುಕೊಳ್ಳಲಾಗದೆಂದು ವಾದಿಸಿದ್ದಾರೆ.

7. ಉಭಯ ಪಕ್ಷಕಾರರ ಪರವಾಗಿ ಮಾನ್ಯ ನ್ಯಾಯವಾದಿಗಳ ಅಹವಾಲುಗಳನ್ನು ಆಲಿಸಲಾಗಿವೆ, ಪ್ರಪ್ರಥಮವಾಗಿ ಇಂಥ ವಿಷಯಗಳಲ್ಲಿ, ಸಾಮಾನ್ಯವಾಗಿ ನಷ್ಟಪರಿಹಾರದ ಐತೀರ್ಪನ್ನು ಗುರುತಿಸಲಾದ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ಯುಕ್ತವಾಗಿ ನೀಡಲಾಗಿರುವುದು ನ್ಯಾಯ ಸಮ್ಮತ ಮತ್ತು ಯುಕ್ತವಾಗಿ ನೀಡಲಾಗಿದೆಯೆಂಬುದರ ಬಗ್ಗೆ ಕಂಡುಕೊಳ್ಳುವುದು ನ್ಯಾಯಾಲಯದ ಉದ್ದೇಶವಾಗಬೇಕು.

8. ಭವಿಷ್ಯತ್ತಿನ ನಿರೀಕ್ಷೆಗಳ ಸಲುವಾಗಿ ಶೇಕಡಾ 50 ರಷ್ಟನ್ನು ಸೇರಿಸಿ ಪರಿಹಾರ ನೀಡುವಷ್ಟರ ಮಟ್ಟಿಗೆ, ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಮತ್ತು ಎದುರುದಾರ–ವಿಮಾದಾರ ಕಂಪನಿಯ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ದೀರ್ಘವಾದ ವಾದಗಳನ್ನು ಮಂಡಿಸಿದ್ದಾರೆ. ಈ ಪ್ರಶ್ನೆಯ ಬಗ್ಗೆ ಈಗ ವ್ಯವಹರಿಸೋಣ.

9. ಅಪೀಲುದಾರರ ಪರವಾಗಿನ ಮಾನ್ಯ ನ್ಯಾಯವಾದಿಯಾದ, ಶ್ರೀಮತಿ ಸುಗುಣ ರೆಡ್ಡಿಯವರು, ***ಸರಳ ವರ್ಮ*** ಪ್ರಕರಣವನ್ನು ಉಲ್ಲೇಖಿಸುವಾಗ ಸರ್ವೋಚ್ಚ ನ್ಯಾಯಾಲಯ ***ರಾಜೇಶ್ ಮತ್ತು ಇತರರು –ವಿರುದ್ಧ– ರಾಜ್‌ಬೀರ್ ಸಿಂಗ್ ಮತ್ತು ಇತರರು (ಮೇಲಿನ)*** ಪ್ರಕರಣದಲ್ಲಿ ಮೂವರು ಸನ್ಮಾನ್ಯ ನ್ಯಾಯಾಧೀಶರು ನೀಡಲಾದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಈ ನ್ಯಾಯಾಲವು, ಅನುಸರಿಸುವ ಅಗತ್ಯವಿದ್ದು, ನಿಗದಿಪಡಿಸಿದ ಮಜೂರಿಗಳೊಂದಿಗೆ ಸ್ವಂತ ಉದ್ಯೋಗಿ ವ್ಯಕ್ತಿಗಳ ಸಂದರ್ಭದಲ್ಲಿ, ಮೃತ ವ್ಯಕ್ತಿಯು, 40 ವರ್ಷಗಳ ಒಳಗಿದ್ದಲ್ಲಿ ತೆರಿಗೆ ಪಾವತಿಯನ್ನು

ಕಳೆದ ತರುವಾಯ ಭವಿಷ್ಯತ್ತಿನ ನಿರೀಕ್ಷೆಗಳಿಗೆ ಸಂಬಂಧಪಟ್ಟಂತೆ ಮೃತನ ವಾಸ್ತವಿಕ ಆದಾಯಕ್ಕೆ ಶೇಕಡಾ 50ರಷ್ಟು ಸೇರಿಸತಕ್ಕದ್ದು; 40–50 ವರ್ಷಗಳ ಗುಂಪಿನ ವಯಸ್ಸಿನಲ್ಲಿರುವ, ಮೃತನ ಪ್ರಕರಣದಲ್ಲಿ ಹೆಚ್ಚುವರಿ ಶೇಕಡಾ 30ರಷ್ಟನ್ನು ಸೇರಿಸತಕ್ಕದು ಎಂದು ನಿವೇದಿಸಿದ್ದಾರೆ. ***ರೇಷ್ಮಾ ಕುಮಾರಿ ಮತ್ತು ಇತರರು –ವಿರುದ್ಧ– ಮದನ್ ಮೋಹನ್ ಮತ್ತು ಮತ್ತೊಬ್ಬರು*** [2] ಸಹ, ಸಮಾನ ಸಂಖ್ಯೆ ನ್ಯಾಯಾಧೀಶರನ್ನೊಳಗೊಂಡಿರುವ ಪೀಠವು, (ಮೂವರು ಸನ್ಮಾನ್ಯ ನ್ಯಾಯಾಧೀಶರು) ಭವಿಷ್ಯತ್ತಿನ ನಿರೀಕ್ಷೆಗಳ ಸಲುವಾಗಿ ಆದಾಯಕ್ಕೆ ಹೆಚ್ಚುವರಿಯಾಗಿ ಸೇರಿಸಿರುವಾಗ, ಮತ್ತು ***ರೇಷ್ಮಾ ಕುಮಾರಿ*** ಪ್ರಕರಣದಲ್ಲಿ ಸಮಾನ ಸಂಖ್ಯೆ ನ್ಯಾಯಾಧೀಶರಿಂದ ನೀಡಲಾದ ಈ ಮುಂಚಿನ ತೀರ್ಪುವಾಗಿರುವುದಿಲ್ಲವೆಂಬುದು ***ರಾಜೇಶ್‌ರ*** ಪ್ರಕರಣದಲ್ಲಿ ಹೇಳಲಾಗಿರುವ ಅನುಪಾತಕ್ಕೆ ಈ ನ್ಯಾಯಾಲಯ ಬದ್ಧವಾಗಿರಬೇಕು. ಸೂಚಿಸಿದ ಸಮಯದಲ್ಲಿ ತಡವಾಗಿ, ರಾಜೇಶ್‌ರ ಪ್ರಕರಣದಂತೆ, ಸರಳ ವರ್ಮ ಪ್ರಕರಣದ ತೀರ್ಪನ್ನು ನ್ಯಾಯಾಧಿಕರಣವು ಅನುಸರಿಸತಕ್ಕದ್ದುವೆಂಬುದು ಆಕೆಯ ವಾದವಾಗಿದೆ. ಈ ವಾದಕ್ಕೆ ಪೂರಕವಾಗಿ, ಆಕೆಯು, ***ಗೋವಿಂದನಾಯಕ್ ಜಿ. ಕಲಘಟಗಿ –ವಿರುದ್ಧ– ವೆಸ್ಟ್ ಪೇಟೆಂಟ್ ಪ್ರೆಸ್ ಕೋ ಲಿಮಿಟೆಡ್ ಮತ್ತು ಮತ್ತೊಬ್ಬರು*** [3] ಮತ್ತು ***ಎಂ.ಎಂ. ಯರಗಟ್ಟಿ –ವಿರುದ್ಧ– ವಸಂತ್*** [4] ಪ್ರಕರಣದಲ್ಲಿ ಈ ನ್ಯಾಯಾಲಯದ ಎರಡೂ ಪೂರ್ಣ ಪೀಠ ತೀರ್ಪುಗಳ ಮೇಲೆ ಅವಲಂಬಿಸಿದ್ದು, ಅದರಲ್ಲಿರುವಂತೆ ಈ ನ್ಯಾಯಾಲಯ, ಸರ್ವೋಚ್ಚ ನ್ಯಾಯಾಲಯದ ಸಹ ಸಮಾನ ಪೀಠಗಳ ತೀರ್ಪುಗಳ ನಡುವೆ ಯಾವುದೇ ಸಂದಿಗ್ಧತೆಯಿದ್ದರೂ ತರುವಾಯದ ಅಭಿಪ್ರಾಯವನ್ನು ಅನುಸರಿಸತಕ್ಕದ್ದು.

10. ಈ ಎರಡೂ ಪೂರ್ಣ ಪೀಠಗಳಿಂದ ನಿರ್ಧರಿಸಿದ ಈ ಎರಡೂ ಪ್ರಕರಣಗಳಲ್ಲಿ, ಕಾನೂನಿನ ಪ್ರಶ್ನೆಯನ್ನು, ರಾಜಿ ಮಾಡಿಕೊಳ್ಳಲಾಗುವುದಿಲ್ಲ ಮತ್ತು ಅವುಗಳ ಪೈಕಿ ಒಂದನ್ನು ಹೆಚ್ಚು ಸದಸ್ಯರ ಪೀಠದಿಂದ ಮತ್ತೊಂದನ್ನು ಕಡಿಮೆ

2. 2013 ಏಐಆರ್ ಎಸ್‌ಸಿಡಬ್ಲ್ಯೂ 3120
3. ಐಎಲ್‌ಆರ್ 1979 ಕೆಎಆರ್ 1401 (ಎಫ್‌ಬಿ)
4. ಐಎಲ್‌ಆರ್ 1987 ಕೆಎಆರ್ 1286 (ಎಫ್‌ಬಿ)

ಸದಸ್ಯರ ಪೀಠದಿಂದ ತೀರ್ಮಾನಿಸಿರುವಾಗ, ಹೆಚ್ಚು ಸದಸ್ಯರ ಪೀಠದ ತೀರ್ಮಾನವನ್ನು, ಯಾವುದೇ ಸಮಯದಲ್ಲಿ ಮುಂಚಿತವಾಗಿಯಾಗಲಿ ಅಥವಾ ತರುವಾಯವಾಗಲಿ ನೀಡಿದ್ದಲ್ಲಿ ಅದನ್ನು, ಉಚ್ಚ ನ್ಯಾಯಾಲಯ ಮತ್ತು ಇತರೇ ನ್ಯಾಯಾಲಯಗಳು ಅನುಸರಿಸತಕ್ಕದ್ದು. ಆದಾಗ್ಯೂ, ಸಮಾನ ಸಂಖ್ಯೆಯನ್ನೊಳಗೊಂಡಿರುವ ನ್ಯಾಯಾಧೀಶರ ಪೀಠಗಳಾಗಿರುವ ಸರ್ವೋಚ್ಚ ನ್ಯಾಯಾಲಯದ ಈ ಎರಡೂ ಸದರಿ ಪೀಠಗಳಲ್ಲಿ ನೀಡಿರುವ ಈ ಎರಡೂ ತೀರ್ಮಾನಗಳ ಪೈಕಿ ತರುವಾಯ, ಉಚ್ಚ ನ್ಯಾಯಾಲಯ ಮತ್ತು ಇತರೆ ನ್ಯಾಯಾಲಯಗಳು ಅನುಸರಿಸತಕ್ಕದ್ದು.

11. ಯಾವುದೇ ವಿಷಯವನ್ನು ವಿಸ್ತೃತ ಪೀಠದ ಅಭಿಪ್ರಾಯಕ್ಕೆ ಉಲ್ಲೇಖಿಸುವಾಗ, ಆ ಅಂಶದ ಮೇಲೆ ಸಂದಿಗ್ಧತೆಯ ಅಭಿಪ್ರಾಯಗಳನ್ನು ಉಲ್ಲೇಖಿಸಿದ ತರುವಾಯ, ಸಮುಚಿತ ಪ್ರಕರಣದಲ್ಲಿ, ಈ ನ್ಯಾಯಾಲಯ ಉಲ್ಲೇಖಿಸಿದ ವಿಷಯವು ಅಂತಿಮವಾಗಿ ಇತ್ಯರ್ಥವಾಗುವವರೆಗೆ ಕಾಯದೇ, ಆ ವಿಷಯವನ್ನು ಉಲ್ಲೇಖಿಸುವುದಕ್ಕೆ ಮುಂಚೆ ಪ್ರಭಾವವುಳ್ಳದ್ದಾಗಿದ್ದು ಕಾನೂನಿನಷ್ಟರ ಮಟ್ಟಿಗೆ ಅನುಸರಿಸಬಹುದಾಗಿದೆಯೆಂದು ಅಗತ್ಯಪಡಿಸಲಾಗಿದೆಯೆಂದು ಮಾನ್ಯ ನ್ಯಾಯವಾದಿಯಾದ ಶ್ರೀಮತಿ ಸುಗುಣ ರೆಡ್ಡಿಯವರು ಮುಂದುವರೆದು ವಾದಿಸಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ, ಆಕೆಯು, ***ಮ್ಯಾನೇಜರ್, ನ್ಯಾಷನಲ್ ಇನ್‌ಷೂರೆನ್ಸ್ ಕಂ. ಲಿಮಿಟೆಡ್ –ವಿರುದ್ಧ– ಸಜು ಪಿ. ಪೌಲ್ ಮತ್ತು ಮತ್ತೊಬ್ಬರು*** [5] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾರೆ. ಸದರಿ ತೀರ್ಪಿನ 23 ಮತ್ತು 25ನೇ ಪ್ಯಾರಾಗ್ರಾಫ್‌ಗಳಲ್ಲಿ ಮಾಡಿದ ಅಭಿಪ್ರಾಯೋಕ್ತಿಗಳಿಗೆ ಈ ನ್ಯಾಯಾಲಯದ ಗಮನವನ್ನು ಸೆಳೆಯಲಾಗಿದ್ದು, ಅದರಲ್ಲಿರುವಂತೆ ಸರ್ವೋಚ್ಚ ನ್ಯಾಯಾಲಯ, ಸಂದಾಯ ಮತ್ತು ವಸೂಲಿಯ ಪ್ರಶ್ನೆಯನ್ನು ಪರಿಗಣಿಸುವಾಗ, ಆ ಪ್ರಶ್ನೆಯನ್ನು ವಿಸ್ತೃತ ಪೀಠಕ್ಕೆ ಉಲ್ಲೇಖಿಸಿದ್ದು, ವಿಸ್ತೃತ ಪೀಠದಿಂದ ಸದರಿ ಪ್ರಶ್ನೆಯ ಪರಿಗಣನೆಯು ಇತ್ಯರ್ಥದಲ್ಲಿದೆಯೆಂದು ಹೇಳಲಾಗಿದ್ದು, ***ಚೆಲ್ಲಾ ಭಾರತಮ್ಮ*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ಹೇಳಲಾದ ಪ್ರಕ್ರಿಯೆಯನ್ನು ಅನುಸರಿಸುವ

5. ಎಐಆರ್ 2013 ಎಸ್‌ಸಿ 1064

ಮೂಲಕ ಮಾಲೀಕನಿಂದ ಹಾಗೆ ಸಂದಾಯ ಮಾಡಬಹುದಾದ ಆ ಮೊತ್ತವನ್ನು ವಿಮಾ ಕಂಪನಿಯು ವಸೂಲಿ ಮಾಡಿಕೊಳ್ಳಬಹುದೆಂಬ ಕಾರಣದಿಂದ ಕ್ಲೇಮುದಾರನಿಂದ ವಿಮಾ ಕಂಪನಿಯು ಈಗಾಗಲೇ ಠೇವಣಿ ಮಾಡಿರುವ ಮೊತ್ತವನ್ನು ಹಿಂತೆಗೆದುಕೊಳ್ಳುವುದಕ್ಕೆ ಅನುಮತಿಸಲಾಗದೆಂಬ ಅರ್ಥವಿರುವುದಿಲ್ಲ. ಅದೇ ಪ್ರಸ್ತಾವಕ್ಕೆ ಪೂರಕವಾಗಿ, ಶ್ರೀಮತಿ ಸುಗುಣ ರೆಡ್ಡಿಯವರು, ***ಮಹಾರಾಷ್ಟ್ರ ಸರ್ಕಾರ ಮತ್ತು ಮತ್ತೊಬ್ಬರು –ವಿರುದ್ಧ– ಸರವ ಶ್ರಮಿಕ್ ಸಂಘ, ಸಾಂಗಲಿ ಮತ್ತು ಇತರರು*** [6] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಮತ್ತೊಂದು ತೀರ್ಪನ್ನು ಉಲ್ಲೇಖಿಸಿದ್ದಾರೆ. 'ಕೈಗಾರಿಕೆ' ಪರಿಭಾಷೆಯ ವ್ಯಾಪ್ತಿ ಮತ್ತು ಪರಿಧಿಗೆ ಸಂಬಂಧಪಟ್ಟಂತೆ ಕೇವಲ ಸವಿವಸ್ತರ ಪ್ರಶ್ನೆಯಾಗಿರುವುದರಿಂದ, ಪರಿಗಣನೆಗಾಗಿ ಉಲ್ಲೇಖಿಸಲಾಗಿದ್ದು, ***ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ –ವಿರುದ್ಧ– ಎ. ರಾಜಪ್ಪ*** [7] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಲಾದ ತೀರ್ಮಾನದ ಬಗ್ಗೆ ವಾದಿಸುತ್ತಾ ಸದರಿ ತೀರ್ಪಿನ 24 ರಿಂದ 27ನೇ ಪ್ಯಾರಾಗಳನ್ನು ಈ ನ್ಯಾಯಾಲಯದ ಗಮನಕ್ಕೆ ಆಕೆಯು ಸರಿಯಾಗಿಯೇ ಸೆಳೆದಿದ್ದು, ಪ್ರಸ್ತುತ ಈಗಾಗಲೇ ಜಾರಿಯಲ್ಲಿರುವ ಕಾನೂನನ್ನು ಕಡೆಗಣಿಸಲಾಗದು. ವಾಸ್ತವವಾಗಿ ಈ ಕಾನೂನಿನ ಸ್ಥಿತಿಯನ್ನು ಅಂಗೀಕರಿಸುವಾಗ, ಮಾನ್ಯ ನ್ಯಾಯವಾದಿಯು ***ಒರಿಸ್ಸಾ ಸರ್ಕಾರ –ವಿರುದ್ಧ– ದಂಡಸಿ, ಸಾಹು*** [8] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇಲೆ ಅವಲಂಬಿಸಿದ್ದಾರೆ.

12. ಆದ್ದರಿಂದ, ಇತ್ತಿಚೀನ ತೀರ್ಪಿನ ಅಂಶದ ಮೇಲೆ ಮತ್ತು ಈ ನ್ಯಾಯಾಲಯ ಬದ್ಧವಾಗಿರುವಂತೆ ದಾಖಲಿಸುವ ಬಗ್ಗೆ ***ರಾಜೇಶ್*** ಪ್ರಕರಣದಲ್ಲಿ ಅಭಿಪ್ರಾಯಪಟ್ಟಿರುವಂತೆ ಸರ್ವೋಚ್ಚ ನ್ಯಾಯಾಲಯ ಹೇಳಲಾದಂತೆ ಭವಿಷ್ಯತ್ತಿನ ನಿರೀಕ್ಷೆಗಳು ಕಾನೂನು ಐತೀರ್ಪಿಗೆ ಸಂಬಂಧ ಪಡುತ್ತದೆಯೆಂದು ಅಪೀಲುದಾರರ ಪರವಾಗಿ ಮಾನ್ಯ ನ್ಯಾಯವಾದಿಯು ವಾದಿಸಿದ್ದಾರೆ.

---

6. (2013) 16 ಎಸ್‌ಸಿಸಿ 16

7. (1978) 2 ಎಸ್‌ಸಿಸಿ 213

8. (1988) 4 ಎಸ್‌ಸಿಸಿ 12

13. ***ಸಂಜಯ್ ವರ್ಮ –ವಿರುದ್ಧ– ಹರಿಯಾಣ ರೋಡ್‌ವೇಸ್*** [9] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯು, ***ಸರಳ ವರ್ಮ*** ಪ್ರಕರಣದಲ್ಲಿ ತೆಗೆದುಕೊಂಡ ಅಭಿಪ್ರಾಯವನ್ನು ಪುನರುಚ್ಚರಿಸಿರುವಾಗ, ***ರೇಷ್ಮಾ ಕುಮಾರಿ*** ಪ್ರಕರಣದೊಂದಿಗೆ ವ್ಯವಹರಿಸಿದ್ದು, 'ಅಸಾಮಾನ್ಯ ಮತ್ತು ಅಸಾಧಾರಣ ಸಂದರ್ಭಗಳು' ಅಭಿವ್ಯಕ್ತಿಯನೊಳಗೊಂಡಿರುವ ತತ್ವವು ನಿರ್ದಿಷ್ಟವಾಗಿ ಅನ್ವಯಿಸಿರುವಾಗ ಎಂದರೆ ***ರೇಷ್ಮಾ ಕುಮಾರಿ ಮತ್ತು ಇತರರು –ವಿರುದ್ಧ– ನಾಷನಲ್ ಇನ್ಸೂರೆನ್ಸ್ ಕಂ. ಲಿಮಿಟೆಡ್ ಮತ್ತು ಇತರರು, ಶ್ರೀಮತಿ ಸರಳ ವರ್ಮ ಮತ್ತು ಇತರರು –ವಿರುದ್ಧ– ದೆಹಲಿ ಸಾರಿಗೆ ನಿಗಮ ಮತ್ತು ಮತ್ತೊಬ್ಬರು*** ಹಾಗೂ ***ರಾಜೇಶ್ ಮತ್ತು ಇತರರು –ವಿರುದ್ಧ– ರಾಜ್‌ಬೀರ್ ಸಿಂಗ್ ಮತ್ತು ಇತರರು*** ಈ ಎಲ್ಲಾ ಸುಸಂಬದ್ಧ ಪ್ರಕರಣಗಳನ್ನು ಉಲ್ಲೇಖಿಸಲಾಗಿದೆಯೆಂದು ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯಾದ ಶ್ರೀಮತಿ ಆರ್. ಸುಗುಣಾರೆಡ್ಡಿಯವರು ಮತ್ತಷ್ಟು ಒತ್ತಿ ಹೇಳಿದ್ದಾರೆ.

14. ***ಸಂಜಯ್ ವರ್ಮ*** ಪ್ರಕರಣ, ಭವಿಷ್ಯತ್ತಿನ ನಿರೀಕ್ಷೆಗಳನ್ನು ಸೇರಿಸುವ ಮೂಲಕ ಆದಾಯದ ನಷ್ಟವನ್ನು ನಿರ್ಧರಿಸುವುದಕ್ಕಾಗಿ ಸ್ವಯಂ ಉದ್ಯೋಗಿಯ ವ್ಯಕ್ತಿಯ ಕ್ಲೇಮಿಗೆ ಸಂಬಂಧಪಡುತ್ತದೆ. ಕ್ಲೇಮುದಾರನ ಗಳಿಕೆಗಳ ಆದಾಯಕ್ಕೆ ಶೇಕಡಾ 50ರಷ್ಟನ್ನು ಹೆಚ್ಚುವರಿಯಾಗಿ, ಆದಾಯ ತೆರಿಗೆ ವಿವರ ಪತ್ರಗಳು ಸಾಕ್ಷ್ಯವಾಗಿರುವಂತೆ ಸ್ಥಿರ ಆದಾಯವನ್ನು ಹೊಂದಿದ ಸುಮಾರು 25 ವರ್ಷಗಳ ವಯಸ್ಸಿನವನು ಗಾಯಾಳುವಾದ ಒಟ್ಟು ಅಂಗವೈಕಲ್ಯತೆಯ ಪರಿಣಾಮವಾಗಿ ಅಪಘಾತದ ಕಾರಣದಿಂದ ಆದಾಯದ ನಷ್ಟದ ಪ್ರಕರಣದಲ್ಲಿ, ನ್ಯಾಯ ಸಮ್ಮತವಾಗಿದೆಯೆಂದು ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಸಂಬಂಧಪಟ್ಟ, ಭವಿಷ್ಯತ್ತಿನ ನಿರೀಕ್ಷೆಗಳಷ್ಟರ ಮಟ್ಟಿಗೆ 30 ವರ್ಷಗಳ ವಯಸ್ಸನ್ನು ಹೊಂದಿರುವ ಮೃತನ ಆದಾಯಕ್ಕೆ ಶೇಕಡಾ 50ರಷ್ಟನ್ನು ಸೇರಿಸಬಹುದಾಗಿದೆವೆಂಬುದನ್ನು ಪ್ಯಾರಾ ಸಂ.10ರಲ್ಲಿ ಅಭಿಪ್ರಾಯಪಟ್ಟಿರುವಾಗ, ***ರೇಷ್ಮಾ ಕುಮಾರಿ, ಸಂತೋಷ್ ದೇವಿ ಮತ್ತು ರಾಜೇಶ್‌ರ*** ಪ್ರಕರಣದಲ್ಲಿ ನೀಡಲಾದ ತೀರ್ಮಾನಗಳನ್ನು ಸಹ ಅದರಲ್ಲಿ

9. (2014) 3 ಎಸ್‌ಸಿಸಿ 210

ಉಲ್ಲೇಖಿಸಲಾಗಿದ್ದು, ದಿನಾಂಕ 15.5.2015 ರಂದು ತೀರ್ಮಾನಿಸಲಾದ ***ಮುನ್ನಾ ಲಾಲ್ ಜೈನ್ ಮತ್ತು ಇನ್ನೊಬ್ಬರು –ವಿರುದ್ಧ– ವಿಪಿನ್ ಕುಮಾರ್ ಶರ್ಮ ಮತ್ತು ಇತರರು*** [10] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಇತರೇ ಮೂರು ತೀರ್ಪುಗಳನ್ನು ಸಹ ಆಕೆಯು, ಈ ನ್ಯಾಯಾಲಯದ ಗಮನಕ್ಕೆ ಸೆಳೆದಿದ್ದಾರೆ. ಆದ್ದರಿಂದ, ಸರ್ವೋಚ್ಚ ನ್ಯಾಯಾಲಯದ ಮೂವರು ನ್ಯಾಯಾಧೀಶರನ್ನೊಳಗೊಂಡಿರುವ ಪೀಠದ ತರುವಾಯದ ಎರಡೂ ತೀರ್ಪುಗಳ ಹಿನ್ನೆಲೆಯಲ್ಲಿ, ಈ ಎರಡೂ ಅಭಿಪ್ರಾಯಗಳನ್ನು ಉಲ್ಲೇಖಿಸಲಾಗಿದೆ ಮತ್ತು ಪರಿಹಾರವನ್ನು ಭವಿಷ್ಯತ್ತಿನ ನಿರೀಕ್ಷೆಗಳಿಗೆ ಸೇರಿಸುವ ಮೂಲಕ ಐತೀರ್ಪು ನೀಡಲಾಗಿದ್ದು, ಈ ನ್ಯಾಯಾಲಯ, ಸರ್ವೋಚ್ಚ ನ್ಯಾಯಾಲಯದ ತರುವಾಯದ ತೀರ್ಪುಗಳಲ್ಲಿ ಹೇಳಲಾದ ಅನುಪಾತವನ್ನು ಅನುಸರಿಸಲು ಬದ್ಧವಾಗಿದೆ ಮತ್ತು ಭವಿಷ್ಯತ್ತಿನ ನಿರೀಕ್ಷೆಗಳನ್ನು ಸೇರಿಸುವ ಮೂಲಕ ಪರಿಹಾರ ನೀಡಲಾಗಿದೆಯೆಂದು ಆಕೆಯು ವಾದಿಸಿದ್ದಾಳೆ.

15. ಮಾನ್ಯ ನ್ಯಾಯವಾದಿಗಳಾದ ಶ್ರೀ ಎ.ಎನ್. ಕೃಷ್ಣಸ್ವಾಮಿ ಮತ್ತು ಶ್ರೀ ಬಿ.ಸಿ. ಸೀತಾರಾಮ್ ರಾವ್‌ರವರು, ವಿಮಾ ಕಂಪನಿಗಳ ಪರವಾಗಿ ಈ ಅಂಶದ ಮೇಲೆ ತಮ್ಮ ವಾದಗಳನ್ನು ಮಂಡಿಸಿದ್ದು, ಭವಿಷ್ಯತ್ತಿನ ನಿರೀಕ್ಷೆಗಳು ಸೇರಿದಂತೆ ಪರಿಹಾರ ನೀಡುವುದಕ್ಕೆ ಸಂಬಂಧಪಟ್ಟಂತೆ ಪ್ರಶ್ನಿಸಿದ್ದು, ***ನ್ಯಾಷನಲ್ ಇನ್‌ಷೂರನ್ಸ್ ಕಂಪನಿ ಲಿಮಿಟೆಡ್ –ವಿರುದ್ಧ– ಪುಷ್ಪಾ ಮತ್ತು ಇತರರು*** [11] ಪ್ರಕರಣದಲ್ಲಿ ಈ ಎರಡೂ ತೀರ್ಪುಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ಹೆಚ್ಚಿನ ಹೆಚ್ಚು ನ್ಯಾಯಾಧೀಶರನ್ನು ಒಳಗೊಂಡ ನ್ಯಾಯಪೀಠಕ್ಕೆ ಉಲ್ಲೇಖಿಸಲಾಗಿದ್ದು, ಆದೇಶ ದಿನಾಂಕ 2.7.2014ರ ಮೂಲಕ ಮತ್ತು ***ಶಶಿಕಲಾ ಮತ್ತು ಇತರರು –ವಿರುದ್ಧ– ಗಂಗಲಕ್ಷ್ಮಮ್ಮ ಹಾಗೂ ಇನ್ನೊಬ್ಬರು*** [12] ಪ್ರಕರಣದಲ್ಲಿಯೂ ಸಹ, ಸರ್ವೋಚ್ಛ ನ್ಯಾಯಾಲಯ, ಭವಿಷ್ಯತ್ತಿನ ನಿರೀಕ್ಷೆಗಳು ಸೇರಿದಂತೆ ಸದರಿ ಶೀರ್ಷಿಕೆಯ ಅಡಿಯಲ್ಲಿ ಯಾವುದೇ ಪರಿಹಾರ ನೀಡಲು ಆಯ್ಕೆ ಮಾಡಲಾಗದು, ಈ ನ್ಯಾಯಾಲಯ, ಈ ವಿವಾದವನ್ನು ಹೊರತುಪಡಿಸಿ ಸದರಿ ಶೀರ್ಷಿಕೆಯ ಅಡಿಯಲ್ಲಿ ಪರಿಹಾರ ನೀಡಲಾಗದು,

10. (2015) 6 ಎಸ್‌ಸಿಸಿ 347
11. (2015) 9 ಎಸ್‌ಸಿಸಿ 166
12. (2015) 9 ಎಸ್‌ಸಿಸಿ 150

ಇತ್ಯರ್ಥದಲ್ಲಿರುವ ಆ ವಿಷಯವನ್ನು ಸರ್ವೋಚ್ಚ ನ್ಯಾಯಾಲಯದ ವಿಸ್ತೃತ ಪೀಠದಿಂದ ಪೂರ್ಣವಾಗಿ ಮತ್ತು ಅಂತಿಮವಾಗಿ ನಿರ್ಧರಿಸಬೇಕೆಂದು ವಾದಿಸಿದ್ದಾರೆ.

16. ***ರೇಷ್ಮ ಕುಮಾರಿ*** ಪ್ರಕರಣದಲ್ಲಿ ಸಮಾನ ಸಂಖ್ಯೆ ನ್ಯಾಯಾಧೀಶರನ್ನೊಳಗೊಂಡ ಪೀಠದ ಈ ಮುಂಚಿನ ತೀರ್ಪನ್ನು ಉಲ್ಲೇಖಿಸದಿರುವುದರಿಂದ ***ರಾಜೇಶ್ ಪ್ರಕರಣ***ವನ್ನು, ಅದು ಪೂರ್ವ ನಿರ್ಣಯವಾಗದೆ ಇರುವುದರಿಂದ, ಮತ್ತು ಇದಕ್ಕೆ ಸಂಬಂಧಪಟ್ಟಂತೆ, ***ಭಾರತ ಒಕ್ಕೂಟ ಮತ್ತು ಇತರರು –ವಿರುದ್ಧ– ಎಸ್.ಕೆ. ಕಪೂರ್*** [13] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇಲೆ ಅವರು ಅವಲಂಬಿತರಾಗಿದ್ದಾರೆಂದು ಮಾನ್ಯ ನ್ಯಾಯವಾದಿಯಾದ, ಶ್ರೀ ಎ.ಎನ್. ಕೃಷ್ಣಸ್ವಾಮಿ ರವರು ಮುಂದುವರೆದು ವಾದಿಸಿದ್ದಾರೆ. ಅದರಲ್ಲಿರುವಂತೆ ಸದರಿ ತೀರ್ಪಿನ ಪ್ಯಾರಾ ಸಂ.9ನ್ನು ಈ ನ್ಯಾಯಾಲಯದ ಗಮನಕ್ಕೆ ಸೆಳೆಯಲಾಗಿದ್ದು, ಅದನ್ನು ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:–

> ‘‘ಎಸ್.ಎನ್. ನೂರುಲ್ಲಾ ಪ್ರಕರಣದ ತೀರ್ಮಾನವು, ಟಿ.ವಿ. ಪಟೇಲ್ ಪ್ರಕರಣದ ತೀರ್ಮಾನಕ್ಕೆ ಹಿಂದಿನದ್ದಾಗಿದೆವೆಂಬುದನ್ನು ಗಮನಿಸಬಹುದಾಗಿದೆ. ಸಮಾನ ಸಂಖ್ಯೆಯ ಸಮನ್ವಯ ಪೀಠ ತರುವಾಯ ವಿವಿಧ ಅಭಿಪ್ರಾಯವನ್ನು ತೆಗೆದುಕೊಳ್ಳಲು ಇಚ್ಛಿಸಿದ್ದಲ್ಲಿ, ಅದು, ಹೆಚ್ಚಿನ ಸದಸ್ಯರ ಪೀಠಕ್ಕೆ ಮಾತ್ರ ಆ ವಿಷಯವನ್ನು ಕಳುಹಿಸಿ, ಅನ್ಯಥಾ ಸಮನ್ವಯ ಪೀಠದ ಹಿಂದಿನ ತೀರ್ಮಾನವು, ಸಮಾನ ಸಂಖ್ಯೆಯ ತರುವಾಯದ ಪೀಠದ ಮೇಲೆ ಬದ್ಧವಾಗಿದೆವೆಂಬುದು ಸುಸ್ಥಾಪಿತವಾಗಿದೆ. ಆದುದರಿಂದ, ಅನಂತರದ ತೀರ್ಮಾನವು, ಅಜಾಗರೂಕತೆಯ ತೀರ್ಪು ಆಗಿದ್ದು, ಎಸ್.ಎನ್. ನೂರುಲ್ಲಾ ಪ್ರಕರಣದಲ್ಲಿನ ತೀರ್ಮಾನವನ್ನು ಟಿ.ವಿ. ಪಟೇಲ್ ಪ್ರಕರಣದಲ್ಲಿ ಗಮನಿಸಲಾಗದು. ಎಸ್.ಎನ್. ನೂರುಲ್ಲಾ ಪ್ರಕರಣದಲ್ಲಿನ

13. (2011) 4 ಎಸ್‌ಸಿಸಿ 589

> ತೀರ್ಮಾನವು ಸಮಾನ ಸಂಖ್ಯೆಯ ತರುವಾಯದ ಪೀಠದ ಮೇಲೆ ಬದ್ಧವಾಗಿದೆ ಮತ್ತು ಹಾಗಾಗಿ, ಅದನ್ನು ವಿರುದ್ಧವಾದ ದೃಷ್ಟಿಕೋನದ ಹಿನ್ನೆಲೆಯಲ್ಲಿ ತೆಗೆದುಕೊಳ್ಳಲಾಗದು, ಎಂಬುದನ್ನು ಈ ನ್ಯಾಯಾಲಯದ ಸರಣಿ ತೀರ್ಪುಗಳ ಮೂಲಕ ಇತ್ಯರ್ಥಪಡಿಸಲಾಗಿದೆ."

17. ಮೋಟಾರು ಅಪಘಾತ ಕ್ಲೇಮುವಿನಲ್ಲಿ ಪರಿಹಾರವನ್ನು ನಿರ್ಧರಿಸುವ ಆಧಾರ ಭೂತ ತತ್ವವು, ಗಾಯಾಳುಗಳಿಗೆ ನೀಡಲಾದ ಪರಿಹಾರ ನ್ಯಾಯಸಮ್ಮತ ಮತ್ತು ಯುಕ್ತವಾಗಿದೆಯೆಂದು ಖಚಿತಪಡಿಸುವುದಾಗಿದೆಯೆಂದು ಮಾನ್ಯ ನ್ಯಾಯವಾದಿಯಾದ, ಶ್ರೀ ಎ.ಎನ್. ಕೃಷ್ಣಸ್ವಾಮಿ ಯವರು ಸಹ ವಾದಿಸಿದ್ದಾರೆ. ಆದ್ದರಿಂದ, ಆ ವಿಷಯದಂತೆ, ಸರ್ವೋಚ್ಚ ನ್ಯಾಯಾಲಯದ ಹೆಚ್ಚು ನ್ಯಾಯಾಧೀಶರನ್ನು ಒಳಗೊಂಡ ನ್ಯಾಯಪೀಠದಿಂದ ಈಗ ಕೈಗೆತ್ತಿಕೊಳ್ಳಲಾಗಿದ್ದು, ಈ ನ್ಯಾಯಾಲಯ, ಆ ವಿಷಯವನ್ನು ಪುನಃ ಪ್ರಾರಂಭಿಸಿ ಸ್ವಾತಂತ್ರ್ಯವನ್ನು ಕಾಯ್ದಿರಿಸುವ ಇತರೇ ಸುಸ್ಥಾಪಿತ ತತ್ವಗಳ ಆಧಾರದ ಮೇಲೆ ಪರಿಹಾರ ಪಾವತಿಸಲು ನಿರ್ಧರಿಸಬಹುದು ಮತ್ತು ಭವಿಷ್ಯತ್ತಿನ ನಿರೀಕ್ಷೆಗಳು ಸೇರಿದಂತೆ ಆ ತೀರ್ಪನ್ನು ಮಾರ್ಪಡಿಸಲು ಕೋರಿದ್ದು, ಅಂತಿಮವಾಗಿ ಸರ್ವೋಚ್ಚ ನ್ಯಾಯಾಲಯ ಈ ಪ್ರಕರಣದಲ್ಲಿ, ಕ್ಲೇಮುದಾರರ, ಆದಾಯಕ್ಕೆ ಭವಿಷ್ಯತ್ತಿನ ನಿರೀಕ್ಷೆಗಳ ಹೆಚ್ಚುವರಿಯನ್ನು ಸೇರಿಸುವುದಕ್ಕೆ ಹಕ್ಕುಳ್ಳವರಾಗಿರುತ್ತಾರೆಯೆಂದು ಅಭಿಪ್ರಾಯಪಟ್ಟಿದೆಯೆಂದು ನಿವೇದಿಸಿದ್ದಾರೆ.

18. ಉಭಯ ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳ ಸುನಾವಣೆಯನ್ನು ಆಲಿಸಿದ ಮೇಲೆ, ಪರಿಹಾರವನ್ನು ನಿರ್ಧರಿಸುವಾಗ ಭವಿಷ್ಯತ್ತಿನ ನಿರೀಕ್ಷೆಗಳ ಸಲುವಾಗಿ ಆದಾಯದ ಕೆಲವೊಂದು ಶೇಕಡಾವಾರು ಹೆಚ್ಚುವರಿಗೆ ಸಂಬಂಧಪಟ್ಟಂತೆ ನಿಸ್ಸಂದೇಹವಾಗಿ, ಮೇಲೆ ಪ್ರಸ್ತಾಪಿಸಲಾದಂತೆ ಪರಿಗಣನೆಗಾಗಿ ಹೆಚ್ಚು ನ್ಯಾಯಾಧೀಶರ ನ್ಯಾಯ ಪೀಠಕ್ಕೆ ಒಪ್ಪಿಸಲಾಗಿರುವುದನ್ನು ನಾನು ಕಂಡಿದ್ದೇನೆ. ***ರಾಜೇಶ್‌ರ*** ಪ್ರಕರಣವನ್ನು ನಿರ್ಧರಿಸುವಾಗ, ಸರ್ವೋಚ್ಚ ನ್ಯಾಯಾಲಯದ ಮೂವರು ನ್ಯಾಯಾಧೀಶರ ಪೀಠ, ***ರೇಷ್ಮಾ ಕುಮಾರಿ*** ಪ್ರಕರಣವನ್ನು ಉಲ್ಲೇಖಿಸುವ ಸಂದರ್ಭ

ಬಂದಿರಲಾರದು, ಅದನ್ನು ಅದರಂತೆ ಸಮಾನ ಸಂಖ್ಯೆಯನ್ನೊಳಗೊಂಡಿರುವ ಪೀಠದಿಂದ ಸಹ ನಿರ್ಧರಿಸಿದ್ದು, ತರುವಾಯದ ಪೀಠದ ಗಮನಕ್ಕೆ ತಂದಿರಲಿಲ್ಲವೆಂಬುದು ಸಹ ಸ್ಪಷ್ಟವಾಗಿದೆ. ಆದರೆ, ತರುವಾಯ, ***ಮುನ್ನಾ ಲಾಲ್ ಜೈನ್ ಮತ್ತು ಇತರರು –ವಿರುದ್ಧ– ವಿಪಿನ್ ಕುಮಾರ್ ಶರ್ಮ ಮತ್ತು ಇತರರು*** ಮತ್ತು ***ಸಂಜಯ್ ವರ್ಮ –ವಿರುದ್ಧ– ಹರಿಯಾಣ ರೋಡ್ ವೇಸ್*** ಪ್ರಕರಣದಲ್ಲಿ ಸನ್ಮಾನ್ಯ ಮೂವರು ನ್ಯಾಯಾಧೀಶರನ್ನೊಳಗೊಂಡ ಸರ್ವೋಚ್ಚ ನ್ಯಾಯಾಲಯ ನೀಡಲಾದ ಕನಿಷ್ಟ ಪಕ್ಷ ಈ ಎರಡು ತೀರ್ಮಾನಗಳಲ್ಲಿ, ಸರ್ವೋಚ್ಛ ನ್ಯಾಯಾಲಯ, ಭವಿಷ್ಯತ್ತಿನ ನಿರೀಕ್ಷೆಗಳ ಸಲುವಾಗಿ ಆದಾಯದ ಕೆಲವೊಂದು ಶೇಕಡಾವಾರು ಹೆಚ್ಚುವರಿಯ ಈ ಅಂಶದೊಂದಿಗೆ ವ್ಯವಹರಿಸಿದೆ. ಈ ಸಂಗತಿಯ ಹಿನ್ನೆಲೆಯಲ್ಲಿ, ಆ ವಿಷಯವಾಗಿರುವುದರಿಂದ, ***ನ್ಯಾಷನಲ್ ಇನೂಷರೆನ್ಸ್ ಕಂಪನಿ ಲಿಮಿಟೆಡ್ –ವಿರುದ್ಧ– ಪುಷ್ಪ ಮತ್ತು ಇತರರು*** ಹಾಗೂ ***ಶಶಿಕಲಾ ಮತ್ತು ಇತರರು –ವಿರುದ್ಧ– ಗಂಗಲಕ್ಷ್ಮಮ್ಮ ಮತ್ತು ಮತ್ತೊಬ್ಬರು*** ಪ್ರಕರಣದಲ್ಲಿ ಹೆಚ್ಚು ನ್ಯಾಯಾಧೀಶರನ್ನು ಒಳಗೊಂಡ ನ್ಯಾಯ ಪೀಠಕ್ಕೆ ಒಪ್ಪಿಸಲಾಗಿದೆಯೆಂಬ ಮಾತ್ರಕ್ಕೆ ಈ ನ್ಯಾಯಾಲಯ, ಕೈಕಟ್ಟಿ ಹಾಕಿದೆ ಮತ್ತು ಭವಿಷ್ಯತ್ತಿನ ನಿರೀಕ್ಷೆಗಳ ಶೀರ್ಷಿಕೆಯ ಅಡಿಯಲ್ಲಿ ಪರಿಹಾರ ನೀಡಿಲ್ಲವೆಂದು ಹೇಳುವುದಕ್ಕೆ ಈ ನ್ಯಾಯಾಲಯ ಯುಕ್ತವಾಗಿಲ್ಲ. ***ರೇಷ್ಮಾ ಕುಮಾರಿ*** ಮತ್ತು ***ರಾಜೇಶ್*** ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ಈ ಮುಂಚಿನ ತೀರ್ಪುಗಳನ್ನು ಒಮ್ಮೆ, ಉಲ್ಲೇಖಿಸಿರುವುದು ಕಂಡು ಬಂದಿದೆ ಮತ್ತು ***ಸಂಜಯ್ ವರ್ಮ*** ಮತ್ತು ***ಮುನ್ನಾ ಲಾಲ್ ಜೈನ್*** ಪ್ರಕರಣಗಳಲ್ಲಿ ತರುವಾಯದ ತೀರ್ಪುಗಳನ್ನು ಪರೀಕ್ಷಿಸಲಾಗಿದ್ದು, ಅದರಲ್ಲಿರುವಂತೆ ಸನ್ಮಾನ್ಯ ಮೂವರು ನ್ಯಾಯಾಧೀಶರ ಪೀಠದ ಸಂಖ್ಯೆಯು ಸಹ ಮೂವರು ನ್ಯಾಯಾಧೀಶರನ್ನೊಳಗೊಂಡಿದ್ದು ಈ ನ್ಯಾಯಾಲಯ, ತರುವಾಯದ ತೀರ್ಪುಗಳಲ್ಲಿ ಹೇಳಲಾದ ತತ್ವಗಳನ್ನು ಅನುಸರಿಸುವುದಕ್ಕೆ ಬದ್ಧವಾಗಿದೆ. ಈ ನ್ಯಾಯಾಲಯ, ತರುವಾಯದ ತೀರ್ಪುಗಳಲ್ಲಿ ಹೇಳಲಾದ ಅನುಪಾತವನ್ನು ಕಡೆಗಣಿಸಲಾಗದು, ಅದರಲ್ಲಿರುವಂತೆ ಈ ಮುಂಚಿನ ಸಂದಿಗ್ಧ ಅಭಿಪ್ರಾಯವನ್ನು ಉಲ್ಲೇಖಿಸಲಾಗಿದೆ ಮತ್ತು ಮುಂದುವರಿಯುತ್ತಿರುವ ಅಂಶದ ಮೇಲೆ ನಿರ್ಧರಿಸಲಾಗಿದೆವೆಂಬುದು ಈ ಮುಂಚಿನ ನಿಯಮದ ಆಜ್ಞಾಪಕವಾಗಿದೆ.

19. ***ಮುನ್ನಾ ಲಾಲ್ ಜೈನ್*** ಪ್ರಕರಣಗಳಲ್ಲಿ ಭವಿಷ್ಯತ್ತಿನ ನಿರೀಕ್ಷೆಗಳಿಗೆ ಸಂಬಂಧಪಟ್ಟಂತೆ ***ರೇಷ್ಮಾ ಕುಮಾರಿ*** ಮತ್ತು ***ರಾಜೇಶ***ರ ಪ್ರಕರಣಗಳಲ್ಲಿ ಮೂವರು ನ್ಯಾಯಾಧೀಶರ ಈ ಮುಂಚಿನ ತೀರ್ಪುಗಳಲ್ಲಿ ಉಲ್ಲೇಖಿಸಲಾಗಿದ್ದರೂ, ಈ ನ್ಯಾಯಾಲಯ, ಈ ಎರಡೂ ಪ್ರಕರಣಗಳಲ್ಲಿನ ವಿಭಿನ್ನ ಅಭಿಪ್ರಾಯಗಳನ್ನು ಪರೀಕ್ಷಿಸಿರುವುದಿಲ್ಲ ಮತ್ತು ಅದು ಸ್ವಂತ ಅಭಿಪ್ರಾಯವನ್ನು ರೂಪಿಸಿರುವುದಿಲ್ಲವೆಂಬುದು ಸತ್ಯವಾದುದು. ಆದರೆ ಸನ್ಮಾನ್ಯ ಮೂವರು ನ್ಯಾಯಾಧೀಶರನ್ನೊಳಗೊಂಡ ಪೀಠದಿಂದ ದಿನಾಂಕ 29.1.2014 ರಂದು ತೀರ್ಮಾನಿಸಿದ ಸಂಜಯ್ ವರ್ಮ ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯ, ***ರೇಷ್ಮಾ ಕುಮಾರಿ*** ಮತ್ತು ***ರಾಜೇಶ್***ರ ಪ್ರಕರಣಗಳಲ್ಲಿ ವ್ಯಕ್ತಪಡಿಸಲಾದ ಈ ಎರಡೂ ವಿಭಿನ್ನ ಅಭಿಪ್ರಾಯಗಳನ್ನು ನಿರ್ದಿಷ್ಟವಾಗಿ ಉಲ್ಲೇಖ ಮಾಡಲಾಗಿದೆ ಮತ್ತು ಭವಿಷ್ಯತ್ತಿನ ನಿರೀಕ್ಷೆಗಳ ಶೀರ್ಷಿಕೆಯ ವಿರುದ್ಧವಾಗಿದ್ದರೂ ಸಹ ಪರಿಹಾರ ನೀಡಲಾಗಿದೆ. 13 ರಿಂದ 16ನೇ ಪ್ಯಾರಾಗಳಲ್ಲಿ ಮಾಡಿದ ಅಭಿಪ್ರಾಯೋಕ್ತಿಗಳನ್ನು ಉಲ್ಲೇಖಿಸುವುದು ಉಪಯುಕ್ತವಾಗಿದ್ದು, ಅದನ್ನು ಈ ಕೆಳಗಿನಂತೆ ಉದ್ಧೃತಗೊಳಿಸಲಾಗಿದೆ:–

> *"13. ಸಂತೋಷ್ ದೇವಿ ಪ್ರಕರಣದಲ್ಲಿ ತೆಗೆದುಕೊಂಡ ಅಭಿಪ್ರಾಯವನ್ನು, ಈ ಮುಂದಿನಂತೆ ಅಭಿಪ್ರಾಯಪಡುವುದರ ಮೂಲಕ ರಾಜೇಶ್ ಮತ್ತು ಇತರರು –ವಿರುದ್ಧ– ರಾಜ್‌ಬೀರ್ ಸಿಂಗ್ ಪ್ರಕರಣದಲ್ಲಿ ಮೂವರು ನ್ಯಾಯಾಧೀಶರ ಪೀಠದಿಂದ ಪುನರಚ್ಚರಿಸಲಾಗಿದೆ: (ರಾಜೇಶ್ ಪ್ರಕರಣ, ಎಸ್‌ಸಿಸಿ ಪಿ.61 ಪ್ಯಾರಾಗಳು 8–9)*
>
> *"8. ಅಂದಿನಿಂದ, ವಾಸ್ತವಿಕವಾಗಿ ಸಂತೋಷ್ ದೇವಿ ಪ್ರಕರಣದಲ್ಲಿ ಈ ನ್ಯಾಯಾಲಯ, ಸರಳ ವರ್ಮ ಪ್ರಕರಣದಲ್ಲಿ ಹೇಳಲಾದಂತೆ ಸಂಬಳ ಪಡೆಯುವ ವ್ಯಕ್ತಿಗಳ ಸಂದರ್ಭದಲ್ಲಿನ ತತ್ವವನ್ನು ಅನುಸರಿಸಲು ಉದ್ದೇಶಿಸಲಾಗಿದೆ ಮತ್ತು ಸ್ವಯಂ ಉದ್ಯೋಗಿಗಳಿಗೂ ಮತ್ತು ನಿಗದಿಪಡಿಸಲಾದ ಮಜೂರಿಗಳ*

*ಮೇಲಿನ ವ್ಯಕ್ತಿಗಳಿಗೆ, ಸಹ ಅದನ್ನು ಅನ್ವಯಿಸುವಂತೆ ಉದ್ದೇಶಿಸಲಾಗಿದ್ದು, ಅದನ್ನು, ಈ ಗುಂಪುಗಳ ಪ್ರಕರಣದಲ್ಲಿ, ಯಾವಾಗಲೂ ಶೇಕಡಾ 30ರಷ್ಟಕ್ಕಿಂತ ಹೆಚ್ಚಾಗಬಾರದೆಂಬುದನ್ನು ಸ್ಪಷ್ಟಪಡಿಸಲಾಗಿದೆ; ಅದನ್ನು ವಯಸ್ಸಿಗೆ ಸಂಬಂಧಪಟ್ಟಂತೆ ಸಹ ಉಲ್ಲೇಖಿಸಲಾಗಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಸ್ವಂತ-ಉದ್ಯೋಗ ಅಥವಾ ನಿಗದಿಪಡಿಸಲಾದ ಮಜೂರಿಗಳೊಂದಿಗಿನ ವ್ಯಕ್ತಿಗಳ ಸಂದರ್ಭದಲ್ಲಿ, ಗಾಯಾಳು 40 ವರ್ಷಗಳ ಕೆಳಗಿನ ವಯೋಮಿತಿ ಸಂದರ್ಭದಲ್ಲಿ, ಭವಿಷ್ಯತ್ತಿನ ನಿರೀಕ್ಷೆಗಳನ್ನು ಲೆಕ್ಕ ಹಾಕುವಾಗ ಮೃತನ ವಾಸ್ತವಿಕ ಆದಾಯಕ್ಕೆ ಶೇಕಡಾ 50 ರಷ್ಟು ಹೆಚ್ಚುವರಿಯಾಗಿರತಕ್ಕದ್ದು. ವಾಸ್ತವಿಕ ಆದಾಯ, ಯಾವುದೇ ಇದ್ದಲ್ಲಿ, ತೆರಿಗೆಯನ್ನು ಪಾವತಿಸಿದ ತರುವಾಯದ ಆದಾಯವಾಗಿರತಕ್ಕದ್ದು ಎಂದು ಹೇಳುವ ಅಗತ್ಯವಿಲ್ಲ. 40 ರಿಂದ 50 ವರ್ಷಗಳ ವಯಸ್ಸಿನ ಗುಂಪಿನಲ್ಲಿರುವ ಮೃತನ ಸಂದರ್ಭದಲ್ಲಿ ಹೆಚ್ಚುವರಿಯು, ಶೇಕಡಾ 30ರಷ್ಟು ಆಗಿರತಕ್ಕದ್ದು.*

*9. ಸರಳ ವರ್ಮ ಪ್ರಕರಣದಲ್ಲಿ, 50 ವರ್ಷಗಳ ಮೇಲ್ಪಟ್ಟ ಪ್ರಕರಣದಲ್ಲಿ ಅದು ಹೆಚ್ಚುವರಿಯಾಗತಕ್ಕದ್ದಲ್ಲವೆಂದು ಹೇಳಲಾಗಿದೆ. ಸ್ವಂತ ಉದ್ಯೋಗ ಅಥವಾ ನಿಗದಿಪಡಿಸಲಾದ ಮಜೂರಿಗಳ ಮೇಲಿನ ಪ್ರಕರಣದಲ್ಲಿ ಅದು ಸಾಮಾನ್ಯವಾಗಿ, ವಯೋ ನಿವೃತ್ತಿ ಇರುವುದಿಲ್ಲವೆಂಬುದು ವಾಸ್ತವ ಸಂಗತಿಯಾಗಿರುತ್ತದೆ, ಯುಕ್ತ, ನ್ಯಾಯಸಮ್ಮತ, ನಿಷ್ಪಕ್ಷಪಾತ ಮತ್ತು ಯುಕ್ತ ಪರಿಹಾರ ನೀಡಬೇಕಾಗಿರುವುದರಿಂದ 50 ರಿಂದ 60 ವರ್ಷಗಳ ವಯಸ್ಸಿನ ಗುಂಪಿನ ನಡುವೆ, ಮೃತರ ಪ್ರಕರಣದಲ್ಲಿ ಶೇಕಡಾ 15ರಷ್ಟು ಹೆಚ್ಚುವರಿ ನೀಡುವುದು ಮಾತ್ರ ಯುಕ್ತ ಮತ್ತು ನ್ಯಾಯ ಸಮ್ಮತವಾಗಿದೆಯೆಂದು*

*ನಾವು ಅಭಿಪ್ರಾಯಪಟ್ಟಿದ್ದೇವೆ. ಅದು, ಸಾಮಾನ್ಯವಾಗಿ ತದನಂತರ ಹೆಚ್ಚುವರಿಯಾಗಿರತಕ್ಕದ್ದಲ್ಲ.*

*14. ಹೆಚ್ಚು ನ್ಯಾಯಾಧೀಶರನ್ನು ಒಳಗೊಂಡ ನ್ಯಾಯಪೀಠದಿಂದ (ಎಸ್‌ಸಿಸಿ ಪಿ.425, ಪ್ಯಾರಾ10) ಅಗತ್ಯವಾಗಿ ನಿರ್ಣಯಿಸಿದ ಅಂಶಗಳ ಅಭಿಪ್ರಾಯವನ್ನು ತೆಗೆದುಕೊಂಡು ಈ ಮುಂದಿನ ಪ್ರಶ್ನೆಗಳನ್ನು ಪರಿಗಣಿಸಿರುವಾಗ ಈ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರ ಪೀಠ, ರೇಷ್ಮಾ ಕುಮಾರಿ –ವಿರುದ್ಧ– ಮದನ್ ಮೋಹನ್ ಪ್ರಕರಣದಲ್ಲಿ ಮಾಡಿರುವ ಕೆಲವೊಂದು ಸಾದೃಶ್ಯ ಬೆಳವಣಿಗೆಗಳ ಟಿಪ್ಪಣಿಯನು ಇಲ್ಲಿ ತೆಗೆದುಕೊಳ್ಳಬಹುದು.*

*“(1) ಈ ಅಧಿನಿಯಮಕ್ಕೆ ಸೇರಿಸಲಾದ ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಗುಣಕವು ಈ ಎಲ್ಲಾ ಪ್ರಕರಣಗಳಲ್ಲಿ ಆತ್ಮಸಾಕ್ಷಿಗೆ ಅನುಗುಣವಾಗಿ ಅನ್ವಯಿಸುತ್ತದೆಯೇ?*

*(2) ಗುಣಿಸಬೇಕಾದ ಸಂಖ್ಯೆಯ ನಿರ್ಣಯಕ್ಕಾಗಿ, ಭವಿಷ್ಯತ್ತಿನ ನಿರೀಕ್ಷೆಗಳ ನಿರ್ಣಯಕ್ಕೆ ಸಂಬಂಧಪಟ್ಟಂತೆ ನಿರ್ದಿಷ್ಟವಾಗಿ ಯಾವುದೇ ಮಾನದಂಡವನ್ನು ಈ ಅಧಿನಿಯಮವು ಉಪಬಂದಿಸಿದೆಯೇ?”*

*15. ರೇಷ್ಮಾಕುಮಾರಿ –ವಿರುದ್ಧ– ಮದನ್ ಮೋಹನ್ (ಎಸ್‌ಸಿಸಿ ಪಿ.88 ಪ್ಯಾರಾ 36)ರಲ್ಲಿ ಈ ನ್ಯಾಯಾಲಯದ ಮೂವರು ನ್ಯಾಯಾಧೀಶರ ಪೀಠ ಮೇಲಿನ ಉಲ್ಲೇಖಕ್ಕೆ*

*ಉತ್ತರಿಸುವಾಗ ವಾರ್ಷಿಕ ಬಡ್ತಿಗಳಿಗಾಗಿನ ಉಪಬಂಧವನ್ನು ಹೊರತುಪಡಿಸಿದ ಅಥವಾ ಮರಣದ ಸಮಯದಲ್ಲಿ ವಾಸ್ತವಿಕ ಆದಾಯದ ಸ್ವ–ಉದ್ಯೋಗವನ್ನು ಹೊಂದಿದ ವ್ಯಕ್ತಿಗೆ, ನಿಗದಿಪಡಿಸಲಾದ ವೇತನದ ಮೇಲಿನ ವ್ಯಕ್ತಿಯ ಸಂಬಂಧದಲ್ಲಿ 'ಅಪವಾದಾತ್ಮಕ ಮತ್ತು ಅಸಾಧಾರಣ ಸಂದರ್ಭಗಳ' ಹೊರತು, ಸರಳ ವರ್ಮ ಪ್ರಕರಣದಲ್ಲಿ, ತೆಗೆದುಕೊಂಡ ಅಭಿಪ್ರಾಯವನ್ನು ಪುನರುಚ್ಚರಿಸಲಾಗಿದೆ. ಈ ಹಿಂದಿನ ತತ್ವದ ಪ್ರಾಯೋಗಿಕ ಅನ್ವಯತೆಯು, ಶಕ್ತಿದೇವಿ –ವಿರುದ್ಧ– ನ್ಯೂ ಇಂಡಿಯಾ ಇನ್‌ಷೂರನ್ಸ್ ಕಂ. ಲಿಮಿಟೆಡ್‌ನಲ್ಲಿ ಅಪವಾದಾತ್ಮಕ ಮತ್ತು ಅಸಾಧಾರಣವೆಂಬ ಪದಗುಚ್ಛಗಳು ಯಾವುದೇ ಕರಾರುವಕ್ಕಾದ ಪರಿಭಾಷೆಯನ್ನು ಸಮರ್ಥವಾಗಿ ವಿವರಿಸುವುದಿಲ್ಲ. ಆತನ ತಂದೆಯ ನಿವೃತ್ತಿಯನ್ನು ಅನುಸರಿಸಿ ಸರ್ಕಾರಿ ಇಲಾಖೆಯಲ್ಲಿ ಮೃತನ ನಿಯತ ಉದ್ಯೋಗದ ನಿಶ್ಚಿತತೆಯು ಭವಿಷ್ಯತ್ತಿನ ಗಳಿಕೆಗಳ ಸಾಧ್ಯತೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ಮೂಲಕ ಆದಾಯದ ನಷ್ಟವನ್ನು ಲೆಕ್ಕ ಹಾಕುವಾಗ ಸಿಂಧುವಾದ ಕಾರಣವಾಗಬಹುದೆಂದು ಅಭಿಪ್ರಾಯಪಟ್ಟಿದೆ. ಆದಾಯದ ಸದರಿ ನಷ್ಟವನ್ನು ಅದಕ್ಕನುಸಾರವಾಗಿ, ಮೃತನ, ಮರಣದ ಸಮಯದಲ್ಲಿ ಆತನ ಗಳಿಕೆಯ ಮೊತ್ತವನ್ನು ಎರಡರಷ್ಟರಂತೆ ನಿರ್ಣಯಿಸಲಾಗಿದೆ.*

16. ನಿಸ್ಸಂದೇಹವಾಗಿ, ಪ್ರಸ್ತುತ ಪ್ರಕರಣದಲ್ಲಿರುವಂತೆ ಅಪಘಾತದ ಪರಿಣಾಮವಾಗಿ ಗಾಯಾಳುವಿನ ಒಟ್ಟು ಅಂಗವೈಕಲ್ಯತೆಯ ಲೆಕ್ಕದ ಮೇಲೆ ಆದಾಯದ ನಷ್ಟವನ್ನು ನಿರ್ಧರಿಸುವುದಕ್ಕಾಗಿ ಅದೇ ತತ್ವ ಅನ್ವಯಿಸುತ್ತದೆ. ಆದ್ದರಿಂದ, ಕ್ಲೇಮುದಾರನ ವಯಸ್ಸನ್ನು ಲೆಕ್ಕಕ್ಕೆ ತೆಗೆದುಕೊಂಡು

*(25 ವರ್ಷಗಳು) ಮತ್ತು ಅವನ ಸ್ಥಿರ ಆದಾಯದ ಸಂಗತಿಯನ್ನು, ಆದಾಯ ತೆರಿಗೆ ವಿವರ ಪತ್ರಗಳ ಮೂಲಕ ಸಾಕ್ಷ್ಯದಂತೆ ಅಪಘಾತದ ಸಮಯದಲ್ಲಿ ಕ್ಲೇಮುದಾರನ ಗಳಿಕೆಯ ಆದಾಯಕ್ಕೆ ಸೇರಿಸಿ ಶೇಕಡಾ 50 ರಷ್ಟಕ್ಕಿಂತ ಹೆಚ್ಚುವರಿಯನ್ನು ಸಮರ್ಥಿಸಿಕೊಳ್ಳಲಾಗಿದೆಯೆಂದು ನಾವು ಅಭಿಪ್ರಾಯಪಟ್ಟಿದ್ದೇವೆ."*

20. ವಾರ್ಷಿಕ ಬಡ್ತಿಗಳಿಗಾಗಿ ಅವಕಾಶವಿಲ್ಲದೇ ನಿಗದಿಪಡಿಸಲಾದ ವೇತನ ಅಥವಾ ಭವಿಷ್ಯತ್ತಿನ ನಿರೀಕ್ಷೆಗಳ ಸಲುವಾಗಿ ಆದಾಯದ ಶೇಕಡಾ 30ರಷ್ಟನ್ನು ಹೆಚ್ಚಿಸಿರುವಾಗ ಸ್ವಂತ ಉದ್ಯೋಗವನ್ನು ಹೊಂದಿದ ವ್ಯಕ್ತಿಯ ಸಂಬಂಧದಲ್ಲಿ ಪರಿಹಾರ ನೀಡುವ ವಿಷಯದಲ್ಲಿ ***ಸರಳ ವರ್ಮ*** ಪ್ರಕರಣದಲ್ಲಿ ಉಲ್ಲೇಖಿಸಲಾದ ಅಪವಾದಾತ್ಮಕ ಅಭಿವ್ಯಕ್ತಿ ಮತ್ತು ಅಸಾಧಾರಣ, ಸಂದರ್ಭಗಳನ್ನು ***ಸಂಜಯ್ ವರ್ಮ*** ಪ್ರಕರಣದಲ್ಲಿ ನೀಡಲಾದ ತೀರ್ಪಿನಿಂದ ಅದು ಸ್ಪಷ್ಟವಾಗಿದ್ದು, ಅಪವಾದಾತ್ಮಕ ಅಭಿವ್ಯಕ್ತಿ ಮತ್ತು ಅಸಾಧಾರಣ ಸಂದರ್ಭಗಳು, ಕರಾರುವಕ್ಕಾದ ಪರಿಭಾಷೆಯು ಸಮರ್ಥವಾಗಿಲ್ಲವೆಂದು ಅಭಿಪ್ರಾಯಪಟ್ಟಿದೆ. ಅದಕ್ಕೆ ಸಂಬಂಧಪಟ್ಟಂತೆ, ***ಶಕ್ತಿ ದೇವಿ –ವಿರುದ್ಧ– ನ್ಯೂ ಇಂಡಿಯಾ ಇನ್‌ಷೂರೆನ್ಸ್ ಕಂ. ಲಿಮಿಟೆಡ್***[14], ಪ್ರಕರಣವನ್ನು ಉಲ್ಲೇಖಿಸುವಾಗ (***ಸಂಜಯ್ ವರ್ಮ*** ಪ್ರಕರಣದಲ್ಲಿ) ಸರ್ವೋಚ್ಚ ನ್ಯಾಯಾಲಯ, ಆತನ ತಂದೆಯ ನಿವೃತ್ತಿಯನ್ನು ಅನುಸರಿಸಿದ್ದು, ಸರ್ಕಾರಿ ಇಲಾಖೆಯಲ್ಲಿ ಮೃತನ ನಿಯತ ಉದ್ಯೋಗದ ನಿಶ್ಚಿತತೆಗೆ ಈ ಹಿಂದೆ ಹೇಳಲಾದ ತತ್ವಗಳು ನಿರ್ದಿಷ್ಟವಾಗಿ ಅನ್ವಯಿಸುತ್ತಿದ್ದು, ಸಾಧ್ಯವಾಗುವಂತೆ ಭವಿಷ್ಯತ್ತಿನ ಗಳಿಕೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ಮೂಲಕ ಆದಾಯದ ನಷ್ಟವನ್ನು ಲೆಕ್ಕ ಹಾಕಲು ಸಿಂಧುವಾದ ಕಾರಣವಾಗಬಹುದೆಂದು ಅಭಿಪ್ರಾಯಪಟ್ಟಿದೆ. ***ಸಂಜಯ್ ವರ್ಮ*** ಪ್ರಕರಣದಲ್ಲಿ ಈ ಪ್ರಕರಣದ ಸಂಗತಿಗಳಲ್ಲಿ, ಸರ್ವೋಚ್ಚ ನ್ಯಾಯಾಲಯ, 25 ವರ್ಷಗಳ ಯುವಕನು ಗಾಯಾಳುವಾಗಿ ಒಟ್ಟು ಅಂಗವೈಕಲ್ಯತೆಯನ್ನು ಹೊಂದಿರುವಲ್ಲಿ ಮತ್ತು

14. (2010) 14 ಎಸ್‌ಸಿಸಿ 575

ಆತನ ಸ್ಥಿರ ಆದಾಯ ಹೊಂದಿದ್ದಲ್ಲಿ, ಆದಾಯದ ಶೇಕಡಾ 50ರಷ್ಟು ಹೆಚ್ಚುವರಿಯನ್ನು ಭವಿಷ್ಯತ್ತಿನ ನಿರೀಕ್ಷೆಗಳ ಸಲುವಾಗಿ ಅಪಘಾತದ ಸಮಯದಲ್ಲಿ ಕ್ಲೇಮುದಾರನು ಹೊಂದಿದ್ದ ಗಳಿಕೆಯೆಂದು ಲೆಕ್ಕ ಹಾಕುವುದು ಸಮರ್ಥನೀಯವೆಂದು ಅಭಿಪ್ರಾಯಪಟ್ಟಿದೆ.

21. ಆದ್ದರಿಂದ, ಹೆಚ್ಚಿನ ಆದಾಯ ಗಳಿಕೆಗೆ ಸಾಮರ್ಥ್ಯ ಹೊಂದಿದ್ದು ಮತ್ತು ಅಪಘಾತದ ಸಮಯದಲ್ಲಿ ಸ್ಥಿರ ಆದಾಯವನ್ನು ಹೊಂದಿದ ಯುವಕನು ಗಾಯಾಳುವಾಗಿದ್ದಾನೆಂಬುದು ಸಾಕ್ಷ್ಯವು ಕಂಡುಬಂದಲ್ಲಿ, ಭವಿಷ್ಯದ ಸಂಪದದ ಸಲುವಾಗಿ ಹೆಚ್ಚುವರಿ ಮೊತ್ತವನ್ನು ನೀಡಬೇಕೆಂದು ಅಗತ್ಯಪಡಿಸಲಾಗಿದೆಯೆಂದು ಕಂಡು ಬರುತ್ತದೆ. ಹಾಗಾಗಿ, ನನ್ನ ಅಭಿಪ್ರಾಯದಲ್ಲಿ, ಕೇವಲ ಭವಿಷ್ಯತ್ತಿನ ನಿರೀಕ್ಷೆಗಳ ಸಲುವಾಗಿ ಹೆಚ್ಚುವರಿ ಮೊತ್ತವನ್ನು ನೀಡುವ ವಿಷಯಕ್ಕೆ ಸಂಬಂಧಪಡುವುದರಿಂದ, ವಿಸ್ತೃತ ಸದಸ್ಯರ ಪೀಠಕ್ಕೆ ಒಪ್ಪಿಸಲಾಗಿದೆಯೆಂಬ ಕಾರಣದ ಮಾತ್ರದಿಂದಲೇ, ಈ ನ್ಯಾಯಾಲಯ, ಸದರಿ ಶೀರ್ಷಿಕೆಯ ಅಡಿಯಲ್ಲಿ ಯಾವುದೇ ಪರಿಹಾರ ನೀಡಲಾಗದುಯೆಂದು ಅಭಿಪ್ರಾಯಪಡಲಾಗದು. ಈ ನ್ಯಾಯಾಲಯ, ಸಂಜಯ್ ವರ್ಮ ಪ್ರಕರಣದಲ್ಲಿ ಹೇಳಲಾದ ಅನುಪಾತವನ್ನು ಅನುಸರಿಸುವಂತೆ ಅಗತ್ಯಪಡಿಸಲಾಗಿದೆ ಮತ್ತು ಅಪಘಾತದ ಸಮಯದಲ್ಲಿ ಗಾಯಾಳು ಸ್ಥಿರ ಆದಾಯದ ಸಾಕ್ಷ್ಯವನ್ನು ಪ್ರಕಟಪಡಿಸಿದ ಪ್ರಕರಣದಲ್ಲಿ ಸದರಿ ಶೀರ್ಷಿಕೆಯ ಅಡಿಯಲ್ಲಿ ಆ ಮೊತ್ತವನ್ನು ನೀಡಬೇಕಾಗುತ್ತದೆ.

22. ಅಂತಿಮ ವಿಶ್ಲೇಷಣೆಗಳಲ್ಲಿ, ಪ್ರತಿಯೊಂದು ಸಾಕ್ಷ್ಯದ ಮೇಲೆ ಅವಲಂಬಿಸಿದ್ದು, ಭವಿಷ್ಯತ್ತಿನ ನಿರೀಕ್ಷೆಗಳ ಶೀರ್ಷಿಕೆಯ ಸಲುವಾಗಿ ನ್ಯಾಯ ಸಮ್ಮತ ಮತ್ತು ಯುಕ್ತ ಪರಿಹಾರ ಹಾಗೂ ಹೆಚ್ಚುವರಿ ಮೊತ್ತವನ್ನು ನೀಡುವ ಅಗತ್ಯವಿದ್ದು, ಪ್ರತಿಯೊಂದು ಪ್ರಕರಣದ ಸಂದರ್ಭದಲ್ಲೂ ಗಾಯಾಳುವಿನ ವಯಸ್ಸು ಅವನ ವೃತ್ತಿ, ಅವನ ಉದ್ಯೋಗದ ಸ್ವರೂಪ, ಸ್ಥಿರ ಆದಾಯ ಮತ್ತು

ಹೆಚ್ಚಿಸಲಾದ ಆದಾಯದ ಗಳಿಕೆಯ ನಿರೀಕ್ಷೆಗಳನ್ನು ನ್ಯಾಯಾಲಯಗಳು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಆದ್ದರಿಂದ, ಖಾಯಂ ಹುದ್ದೆ ಅಥವಾ ಸರ್ಕಾರಿ ಉದ್ಯೋಗವನ್ನು ಹೊಂದಿದ ವ್ಯಕ್ತಿಯ ಸಂಬಂಧದಲ್ಲಿ ಮಾತ್ರ, ಭವಿಷ್ಯತ್ತಿನ ನಿರೀಕ್ಷೆಗಳ ಶೀರ್ಷಿಕೆಯ ಅಡಿಯಲ್ಲಿ ಪರಿಹಾರ ನೀಡುವುದಕ್ಕಾಗಿ ಹಕ್ಕು ಹೊಂದಿರುವಿಕೆಯು ಉದ್ಭವಿಸುತ್ತದೆ. ಇದನ್ನು, ತಮ್ಮ ಸ್ಥಿರ ಆದಾಯವನ್ನು ಸಾಕ್ಷ್ಯವನ್ನು ತೋರಿಸುವ ಮೂಲಕ ಕೌಶಲ್ಯ ಮತ್ತು ಅಕೌಶಲ್ಯ ಉದ್ಯೋಗ ನೀಡುವ ಸ್ವಯಂ ಉದ್ಯೋಗ ವ್ಯಕ್ತಿಗಳು ಸೇರಿದಂತೆ ಇತರೇ, ನೌಕರರಿಂದಲೂ ಸಹ ಯಶಸ್ವಿಯಾಗಿ ಅದನ್ನು ಕ್ಲೇಮು ಮಾಡಬಹುದು. ಆದ್ದರಿಂದ, ಪ್ರತಿಯೊಂದು ಪ್ರಕರಣದಲ್ಲಿ ಮಂಡಿಸಲಾದ ಸಾಕ್ಷ್ಯದ ಮೇಲೆ ಆ ವಿಷಯವು ಅವಲಂಬಿಸಿದೆ. ಅದಕ್ಕನುಸಾರವಾಗಿ, ಎತ್ತಲಾದ ಅಂಶಕ್ಕೆ ಉತ್ತರಿಸಲಾಗಿದೆ.

23. ಆ ವಿಷಯದಲ್ಲಿ ಮೇಲಿನ ಅಭಿಪ್ರಾಯವನ್ನು ತೆಗೆದುಕೊಂಡಿದ್ದು, ವಿಮಾ ಕಂಪನಿಯು ಯಾವುದೇ ಅಪೀಲು ದಾಖಲು ಮಾಡದೇ ಇರುವುದರಿಂದ ಈ ಪ್ರಕರಣದಲ್ಲಿ ಪಕ್ಷಕಾರರಷ್ಟರ ಮಟ್ಟಿಗೆ ನೆರವು ನೀಡಲಾಗದು. ನ್ಯಾಯಾಧಿಕರಣವು, ಕೂಲಿಯಂತೆ ಅವನನ್ನು ಪರಿಗಣಿಸಿದ್ದು, ಭವಿಷ್ಯತ್ತಿನ ನಿರೀಕ್ಷೆಗಳ ಸಲುವಾಗಿ ಆದಾಯದ ಶೇಕಡಾ 50ರಷ್ಟನ್ನು ಹೆಚ್ಚಿಸಿ ಮುಂದುವರಿಸಿದೆ. ಮೃತನ ಸ್ಥಿರ ಆದಾಯಕ್ಕೆ ಸಂಬಂಧಪಟ್ಟಂತೆ ಯಾವುದೇ ಸಾಕ್ಷ್ಯವಿರುವುದಿಲ್ಲ. ವಿಮಾ ಕಂಪನಿಯು ಯಾವುದೇ ಅಪೀಲನ್ನು ದಾಖಲಿಸದೇ ಇರುವುದರಿಂದ, ನ್ಯಾಯಾಧೀಕರಣದ ಈ ಕ್ರಮವನ್ನು, ಪರಿಹಾರವನ್ನು ಹೆಚ್ಚಿಸುವಂತೆ ಕೋರಿ ಅಪೀಲುದಾರರು ಮಾಡಿದ ಕ್ಲೇಮು ನ್ಯಾಯ ಸಮ್ಮತವಾಗಿದೆ ಎಂಬುದನ್ನು ವಿಚಾರಣೆ ಮಾಡುವ ಉದ್ದೇಶಕ್ಕಾಗಿ ಗಣನೆಗೆ ತೆಗೆದುಕೊಳ್ಳಬಹುದಾಗಿದೆ. ನ್ಯಾಯಾಧೀಕರಣವು, ಸಾಂಪ್ರದಾಯಿಕ ಶೀರ್ಷಿಕೆಗಳ ಅಡಿಯಲ್ಲಿ ಮತ್ತು ಸಾಮಾನ್ಯ ಸಂದರ್ಭಗಳಲ್ಲಿ ಯುಕ್ತ ಮೊತ್ತವನ್ನು ನೀಡದಿರುವುದರಿಂದ, ಈ ನ್ಯಾಯಾಲಯ, ಸದರಿ ಶೀರ್ಷಿಕೆಗಳ ಅಡಿಯಲ್ಲಿ ಹೆಚ್ಚುವರಿ ಮೊತ್ತವನ್ನು ನೀಡಿದೆ. ಕ್ಲೇಮುದಾರರಿಗೆ ಭವಿಷ್ಯತ್ತಿನ ನಿರೀಕ್ಷೆಗಳ ಸಲುವಾಗಿ

ಸ್ವಲ್ಪ ಮೊತ್ತವನ್ನು ನೀಡಲಾಗಿದೆ, ಇತರೇ ಶೀರ್ಷಿಕೆಗಳ ಅಡಿಯಲ್ಲಿ ಹೆಚ್ಚಳ ಮಾಡುವ ಅಗತ್ಯವಿಲ್ಲ.

24. ಹಾಗಾಗಿ, ಯಾವುದೇ ಹೆಚ್ಚುವರಿ ಪರಿಹಾರ ನೀಡುವುದಕ್ಕೆ ಕ್ಲೇಮುಗಳ ನ್ಯಾಯಾಧಿಕರಣದಿಂದ ಮಾಡಿದ ತೀರ್ಪು ಮತ್ತು ಐತೀರ್ಪಿನೊಂದಿಗೆ ಹಸ್ತಕ್ಷೇಪ ಮಾಡುವ ಯಾವುದೇ ಸಮರ್ಥನೆ ನನಗೆ ಕಂಡು ಬರುವುದಿಲ್ಲ.

ಈ ಅಪೀಲಿನಲ್ಲಿ, ಯಾವುದೇ ಅರ್ಹತೆ ಇಲ್ಲದೇ ಇರುವುದರಿಂದ ವಜಾಗೊಳಿಸಲಾಗಿದೆ.